**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರು
ಚಿಕ್ಕಮಗಳೂರು**

**ಸತ್ರ ಮೊಕದ್ದಮೆ ಸಂಖ್ಯೆಃ 29/2023**

| | |
|---|---|
| ಆರೋಪಿಯ ಹೆಸರು | : ಸದಾನಂದ |
| ತಂದೆಯ ಹೆಸರು | : ಲೇಟ್ ಗುರುವ |
| ವಯಸ್ಸು | : 45 ವರ್ಷ |
| ವಾಸಸ್ಥಳ | : ಹೊನ್ನಗುಂಡಿ ಗ್ರಾಮ,<br>ಮೇಗುಂದ ಹೋಬಳಿ,<br>ಕೊಪ್ಪ ತಾಲ್ಲೂಕು,<br>ಚಿಕ್ಕಮಗಳೂರು ಜಿಲ್ಲೆ. |

**ಕಲಂ 313 ಸಿ.ಆರ್ ಪಿ.ಸಿ ಅಡಿಯಲ್ಲಿ ಆರೋಪಿತನ ಹೇಳಿಕೆ**

ಪ್ರಶ್ನೆ 1 ಅಭಿಯೋಜನೆಯ ಸಾಕ್ಷಿಗಳ ಸಾಕ್ಷ್ಯ ವಿಚಾರವನ್ನು ಕೇಳಿದ್ದೀರಾ?
ಉತ್ತರಃ Yes

ಪ್ರಶ್ನೆ-2 ಫಾ್ರಸಾ.1 ವಿಜಯ ಕುಮಾರ್, ಇವರು ತಮ್ಮ ಸಾಕ್ಷ್ಯದಲ್ಲಿ ಮೃತ ಯಶೋದ ತನ್ನ ತಾಯಿ, ಆರೋಪಿಯಾದ ನೀನು ತನ್ನ ತಾಯಿಯ ಎರಡನೇ ಗಂಡನಾಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?
ಉತ್ತರಃ False

ಪ್ರಶ್ನೆ-3 ಫಾ್ರಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ತನ್ನ ತಂದೆಯ ಹೆಸರು ರಮೇಶ. ತಾನು ಹುಟ್ಟಿದ ಒಂದು ವರ್ಷಕ್ಕೆ ತನ್ನ ತಂದೆ ಮೃತಪಟ್ಟಿದ್ದಾಗಿ, ತನಗೆ 20 ವರ್ಷ ವಯಸ್ಸಾಗುವವರೆಗೂ ತಾನು ಮತ್ತು ತನ್ನ ತಾಯಿ ಹಾಂದಿಗ್ರಾಮದ ಬಾರೆಕೆರೆಯಲ್ಲಿರುವ ದುರ್ಗಾಪರಮೇಶ್ವರಿ ಎಸ್ಟೇಟಿನ ಕೂಲಿ ಲೈನ್ ಮನೆಯಲ್ಲಿ ವಾಸವಾಗಿದ್ದಾಗಿ ಮತ್ತು ಸದರಿ ಎಸ್ಟೇಟಿನಲ್ಲಿ ಕೂಲಿ ಕೆಲಸ ಮಾಡಿಕೊಂಡಿದ್ದುದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?
ಉತ್ತರಃ False

ಪ್ರಶ್ನೆ-4 ಫಾ್ರಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ತನ್ನ ತಾಯಿ ಮೃತಪಡುವ 10 ವರ್ಷಗಳ ಹಿಂದೆ ಆರೋಪಿಯಾದ

ನಿನ್ನನ್ನು ಮದುವೆ ಮಾಡಿಕೊಂಡಿದ್ದಾಗಿ, ನಂತರ ತನ್ನ ತಾಯಿ ಹೊನ್ನಗುಂಡಿಯಲ್ಲಿರುವ ಆರೋಪಿಯಾದ ನಿನ್ನ ಮನೆಗೆ ಹೋಗಿ ಅಲ್ಲಿಯೇ ವಾಸವಾಗಿದ್ದುದ್ದಾಗಿ. ತಾನು ಬಾರೆಕೆರೆಯ ಎಸ್ಟೇಟಿನಲ್ಲಿಯೇ ಇದುದ್ದಾಗಿ, ಆರೋಪಿಯಾದ ನೀನು ಮತ್ತು ತನ್ನ ತಾಯಿಗೆ ಚಾಸಾ.13 ಧನುಷ್ ಎಂಬ ಮಗನಿದ್ದುದ್ದಾಗಿ, ತನ್ನ ತಾಯಿ ಮೃತಪಡುವ ಸಮಯಕ್ಕೆ ಆತನಿಗೆ ಅಂದಾಜು 10 ವರ್ಷ ವಯಸ್ಸಾಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-5 ಫ್ರಾಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಹೊನ್ನಗುಂಡಿಯಲ್ಲಿರುವ ಆರೋಪಿಯಾದ ನಿನ್ನ ಅಕ್ಕಪಕ್ಕದ ಮನೆಯವರಿಂದ ತಾನು ತನ್ನ ತಾಯಿಯ ಬಗ್ಗೆ ವಿಚಾರಗಳನ್ನು ಕೇಳಿ ತಿಳಿದುಕೊಳ್ಳುತ್ತಿದ್ದುದ್ದಾಗಿ, ದಿನಾಂಕ 15.11.2022 ರಂದು ತಾನು ಬಾರೆಕೆರೆಯ ಎಸ್ಟೇಟಿನಲ್ಲಿ ಇದ್ದುದ್ದಾಗಿ, ಮಾರನೇ ದಿನ ಬೆಳಿಗ್ಗೆ 10.00 ಗಂಟೆಗೆ ಚಾಸಾ.9 ಸತೀಶರವರು ತನಗೆ ಫೋನ್ ಮಾಡಿ ತನ್ನ ತಾಯಿ ಮೃತಪಟ್ಟಿರುವುದಾಗಿ ತಿಳಿಸಿದ್ದಾಗಿ, ನಂತರ ತಾನು ಬಾರೆಕೆರೆಯಿಂದ ಹೊರಟು ಹೊನ್ನಗುಂಡಿಯಲ್ಲಿರುವ ಆರೋಪಿಯಾದ ನಿನ್ನ ಮನೆಗೆ ಹೋಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-6 ಫ್ರಾಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಸದರಿ ಮನೆಯಲ್ಲಿ ಎರಡು ಕೋಣೆಗಳಿದ್ದುದ್ದಾಗಿ, ಮೊದಲನೇ ಕೋಣೆಯಲ್ಲಿ ಚಾಪೆಯ ಮೇಲೆ ತನ್ನ ತಾಯಿಯ ಶವವನ್ನು ಮಲಗಿಸಲಾಗಿದ್ದಾಗಿ, ತಾನು ನೋಡಿದಾಗ ಆಕೆಯ ಮೂಗಿನ ಮೇಲೆ ರಕ್ತ ಬಂದು ಹೆಪ್ಪುಗಟ್ಟಿದ್ದಾಗಿ, ಆಕೆಯ ಕಣ್ಣುಗಳು ಕಪ್ಪಾಗಿ ಊದಿಕೊಂಡಿದ್ದಾಗಿ, ಆಕೆಯ ಕುತ್ತಿಗೆ ಕಪ್ಪಾಗಿ ಊದಿಕೊಂಡಿದ್ದಾಗಿ, ಅಲ್ಲಿ ಚಾಸಾ.13 ಧನುಷ್ ಇದ್ದುದ್ದಾಗಿ ಮತ್ತು ಅಕ್ಕಪಕ್ಕದ ಜನರು ಸೇರಿದ್ದಾಗಿ, ಅಕ್ಕಪಕ್ಕದ ಮನೆಯವರನ್ನು ವಿಚಾರಿಸಿದಾಗ ಆರೋಪಿಯಾದ ನೀನು ಕುಡಿದುಬಂದು ತನ್ನ ತಾಯಿಯ ಮೇಲೆ ಜಗಳ ಮಾಡುತ್ತಿದ್ದಾಗಿ ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-7 ಪ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ತಾನು ಚಾಸಾ.13 ಧನುಷನನ್ನು ವಿಚಾರಿಸಿದಾಗ ಹಿಂದಿನ ದಿನ ರಾತ್ರಿ ಆತ ತನ್ನ ತಾಯಿಗೆ ಬಿ.ಪಿ. ಮಾತ್ರೆಯನ್ನು ಕೊಟ್ಟಿದ್ದಾಗಿ ನಂತರ ಮೂರು ಜನ ಅಂದರೆ ತನ್ನ ತಾಯಿ, ಆರೋಪಿಯಾದ ನೀನು ಮತ್ತು ಆತ ಊಟ ಮಾಡಿ ಮಲಗಿದ್ದಾಗಿ, ಬೆಳಿಗ್ಗೆ ಆತ ತನ್ನ ತಾಯಿಯನ್ನು ಎಬ್ಬಿಸಿ ನೋಡಿದಾಗ ಆಕೆ ತೀರಿಕೊಂಡಿದ್ದಾಗಿ ಚಾಸಾ.13 ತನಗೆ ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-8 ಪ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ತಾನು ಜಯಪುರ ಪೊಲೀಸ್ ಠಾಣೆಗೆ ಹೋಗಿ ಆರೋಪಿಯಾದ ನೀನು ತನ್ನ ತಾಯಿಯನ್ನು ಕೊಲೆ ಮಾಡಿದ್ದೀಯ ಎಂದು ನಿನ್ನ ವಿರುದ್ಧ ನಿಪಿ.1 ದೂರು ಕೊಟ್ಟಿದ್ದಾಗಿ, ತನಗೆ ಕನ್ನಡ ಭಾಷೆಯಲ್ಲಿ ಓದಲು ಮತ್ತು ಬರೆಯಲು ಬರುವುದಿಲ್ಲ ಹಾಗಾಗಿ ದೂರನ್ನು ತಾನು ಹೇಳಿದ ಮೇರೆಗೆ ಚಾಸಾ.2 ರವಿರವರು ಬರೆದುಕೊಟ್ಟಿದ್ದಾಗಿ, ನಿಪಿ.2 ರಂತೆ ಪ್ರಥಮ ವರ್ತಮಾನ ವರದಿ ದಾಖಲಾಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-9 ಪ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಪೊಲೀಸರು ಆರೋಪಿಯಾದ ನಿನ್ನ ಮನೆಯ ಹತ್ತಿರ ತನಿಖೆಗಾಗಿ ಬಂದಿದ್ದಾಗಿ, ನಂತರ ತಾನು ಅಲ್ಲಿಗೆ ಹೋಗಿದ್ದಾಗಿ, ನಿಪಿ.3 ರಿಂದ ನಿಪಿ.5 ಫೋಟೋಗಳಲ್ಲಿ ತನ್ನ ತಾಯಿ ಯಶೋಧಾಳ ಶವ ಕಂಡು ಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-10 ಪ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಸಾಕ್ಷಿಗೆ ನಿಪಿ.6 ಫೋಟೋದಲ್ಲಿ ಆರೋಪಿಯಾದ ನಿನ್ನ ಮನೆ ಕಂಡುಬಂದಿದ್ದಾಗಿ, ನಿಪಿ.5 ಫೋಟೋದಲ್ಲಿ ಆರೋಪಿಯಾದ ನಿನ್ನ ಮನೆಯ ಒಳಗಡೆ ಚಾಪೆಯ ಮೇಲೆ ತನ್ನ ತಾಯಿಯನ್ನು ಮಲಗಿಸಿರುವುದು ಕಂಡು ಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-11 ಫ್ರಾಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದೂರು ನೀಡಿದ ಬಳಿಕ ತಾನು ಚಾಸಾ.13 ರವರನ್ನು ಘಟನೆಯ ಬಗ್ಗೆ ಪುನಃ ವಿಚಾರಿಸಿದ್ದಾಗಿ, ಆಗ ಚಾಸಾ.13 ರವರು ಆರೋಪಿಯಾದ ನೀನು ಕುಡಿದುಬಂದು ತನ್ನ ತಾಯಿ ಯಶೋಧಾಳಿಗೆ ಹೊಡೆಯುತ್ತಿದ್ದಾಗಿ ತನಗೆ ತಿಳಿಸಿದ್ದಾಗಿ, ತನ್ನ ತಾಯಿ ಮೃತಪಟ್ಟ ದಿನ ಆರೋಪಿಯಾದ ನೀನು ಕುಡಿದು ಬಂದು ಕೋಲಿನಿಂದ ಆಕೆಗೆ ಹೊಡೆದಿದ್ದಾಗಿ ಮತ್ತು ತನ್ನ ತಾಯಿಯ ಕುತ್ತಿಗೆಯನ್ನು ಹಿಸುಕಿದ್ದಾಗಿ ಚಾಸಾ.13 ಧನುಷ್ ತನಗೆ ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-12 ಫ್ರಾಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ತಾನು ತನ್ನ ತಾಯಿಯ ಶವವನ್ನು ನೋಡಲು ಹೋದಾಗ ಆರೋಪಿಯಾದ ನೀನು ನಿನ್ನ ಮನೆಯಲ್ಲಿಯೇ ಇದ್ದುದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-13 ಫ್ರಾಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದೂರು ಕೊಟ್ಟ ಬಳಿಕ ಪೊಲೀಸರು ನಿನ್ನನ್ನು ಬಂಧಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-14 ಫ್ರಾಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕ 16.11.2022 ರಂದು ಬೆಳಿಗ್ಗೆ 10.00 ಗಂಟೆಗೆ ಚಾಸಾ.9 ಸತೀಶ್ ರವರು ತನಗೆ ಫೋನ್ ಮಾಡಿ ತನ್ನ ತಾಯಿ ಮೃತಪಟ್ಟಿರುವ ವಿಚಾರವನ್ನು ತಿಳಿಸಿದ್ದಾಗಿ, ಅದೇ ದಿನ ದಿನಾಂಕ 16.11.2022 ರಂದು ತಾನು ಆರೋಪಿಯಾದ ನಿನ್ನ ವಿರುದ್ಧ ಪೊಲೀಸರಿಗೆ ದೂರನ್ನು ನೀಡಿದ್ದಾಗಿ, ದಿನಾಂಕ 17.11.2022 ರಂದು ಪೊಲೀಸರು ಮರು ವಿಚಾರಣೆಗಾಗಿ ತನ್ನನ್ನು ಠಾಣೆಗೆ ಕರೆಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-15 ಫ್ರಾಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕ 15.11.2022 ರಂದು ಚಾಸಾ.13 ರವರು ಶಾಲೆಯಿಂದ ಮನೆಗೆ

ಬಂದಾಗ ತನ್ನ ತಾಯಿ ಯಶೋಧಾ ಸುಸ್ತಾಗಿ ಮಲಗಿಕೊಂಡಿದ್ದಾಗಿ, ಆಕೆಯ ಮೂಗು ಮತ್ತು ಹಣೆಯಲ್ಲಿ ಗಾಯವಾಗಿ ಕಣ್ಣು ಊದಿಕೊಂಡಿದ್ದಾಗಿ, ಆ ಬಗ್ಗೆ ಆತ ತನ್ನ ತಾಯಿಯನ್ನು ಕೇಳಿದಾಗ ಆಕೆ ಆರೋಪಿ ಕೋಲಿನಿಂದ ಆಕೆಗೆ ಹೊಡೆದಿದ್ದಾಗಿ ತಿಳಿಸಿದ್ದಾಗಿ ಚಾಸಾ.13 ರವರು ತನಗೆ ತಿಳಿಸಿದ್ದಾರೆ ಎಂದು ಮತ್ತು ಆರೋಪಿಯಾದ ನಿನಗೆ ಮದ್ಯಪಾನ ಮಾಡುವ ಅಭ್ಯಾಸದ ಜೊತೆಗೆ ಬೇರೆ ಹೆಂಗಸರ ಸಹವಾಸ ಸಹ ಇದ್ದುದ್ದಾಗಿ ತಿಳಿಸಿ ಆ ದಿನ ಪೊಲೀಸರಿಗೆ ಮುಂದುವರೆದ ಹೇಳಿಕೆಯನ್ನು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-16 ಪ್ರಾಸಾ.2 ರವಿಕುಮಾರ್, ಇವರು ತಮ್ಮ ಸಾಕ್ಷ್ಯದಲ್ಲಿ ಯಶೋಧಾಳ ಮೊದಲನೇ ಗಂಡ ಈಗ್ಗೆ 30 ವರ್ಷಗಳ ಹಿಂದೆ ಮೃತಪಟ್ಟಿದ್ದಾಗಿ, ನಂತರ ಯಶೋಧಾ ಮತ್ತು ಆಕೆಯ ಮಗನಾದ ಪ್ರಾಸಾ.1 ರವರು ನೀಲಿಖಾನ್ ಎಸ್ಟೇಟಿನಲ್ಲಿ ಕೂಲಿ ಕೆಲಸ ಮಾಡಿಕೊಂಡು ಒಟ್ಟಿಗೆ ವಾಸವಾಗಿದ್ದಾಗಿ, ಯಶೋಧಾ ಮೃತಪಡುವ 10 ವರ್ಷಗಳ ಹಿಂದೆ ಆಕೆ ಆರೋಪಿಯಾದ ನಿನ್ನನ್ನು ಮದುವೆಯಾಗಿದ್ದಾಗಿ, ನಂತರ ಆಕೆ ಹೊನ್ನಗುಂಡಿಯಲ್ಲಿರುವ ಆರೋಪಿಯಾದ ನಿನ್ನ ಮನೆಯಲ್ಲಿ ನಿನೊಂದಿಗೆ ವಾಸವಾಗಿದ್ದುದ್ದಾಗಿ, ಆ ಸಮಯದಲ್ಲಿ ಪ್ರಾಸಾ.1 ಪ್ರತ್ಯೇಕವಾಗಿ ದುರ್ಗಾಪರಮೇಶ್ವರಿ ಎಸ್ಟೇಟಿನಲ್ಲಿ ಕೆಲಸ ಮಾಡಿಕೊಂಡು ಅಲ್ಲಿಯೇ ವಾಸವಾಗಿದ್ದುದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-17 ಪ್ರಾಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ತಮ್ಮ ಜನಾಂಗಕ್ಕೆ ಸೇರಿದ ಸತ್ಯ ಸಾರಾಮಣಿ ದೇವಸ್ಥಾನವಿದೆ ಸದರಿ ದೇವಸ್ಥಾನದ ಸಮಿತಿಯಲ್ಲಿ ಆರೋಪಿಯಾದ ನೀನು ಮತ್ತು ಮೃತ ಯಶೋಧಾ ಸದಸ್ಯರಾಗಿದ್ದುದ್ದಾಗಿ, ಯಶೋಧಾ ಆರೋಪಿಯಾದ ನಿನ್ನನ್ನು ಮದುವೆಯಾಗುವ ಹಿಂದಿನಿಂದಲೂ ತನಗೆ ನಿನ್ನ ಪರಿಚಯವಿದ್ದುದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-18 ಪ್ರಾಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕ 16.11.2022 ರಂದು ತಾನು ನೇರಳಕಟ್ಟೆಯಲ್ಲಿರುವ ತಮ್ಮ ಮನೆಯಲ್ಲಿದ್ದುದ್ದಾಗಿ, ಆಗ ಚಾಸಾ.16 ಸಂತೋಷ್ ರವರು ತನಗೆ ಫೋನ್ ಮಾಡಿ ಯಶೋಧಾರವರು ಮೃತಪಟ್ಟಿರುವುದಾಗಿ ತಿಳಿಸಿದ್ದಾಗಿ, ತಾನು ಕೂಡಲೇ ಯಶೋಧಾ ಆರೋಪಿಯಾದ ನಿನ್ನೊಂದಿಗೆ ಹೊನ್ನಗುಂಡಿಯಲ್ಲಿ ವಾಸವಾಗಿದ್ದ ಮನೆಗೆ ಹೋಗಿದ್ದಾಗಿ, ಅಲ್ಲಿ ನಿಮ್ಮ ಅಕ್ಕಪಕ್ಕದ ಮನೆಯವರಾದ ಚಾಸಾ.4 ಅನ್ನಪೂರ್ಣ ಮತ್ತು ಚಾಸಾ.5 ಬೇಬಿ ಮತ್ತು ಚಾಸಾ.9 ಸತೀಶ, ಪ್ರಾಸಾ.1 ವಿಜಯ್ ಕುಮಾರ್, ಚಾಸಾ.8 ಮೀನಾ, ಉಮೇಶ, ರವಿ ಮತ್ತು ರಮೇಶರವರು ಇದ್ದುದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-19 ಪ್ರಾಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಯಶೋಧಾ ಆರೋಪಿಯಾದ ನಿನ್ನೊಂದಿಗೆ ವಾಸವಿದ್ದ ಮನೆಯ ಮೊದಲನೇ ಕೋಣೆಯಲ್ಲಿ ಯಶೋಧಾಳ ಮೃತದೇಹವಿದ್ದುದ್ದಾಗಿ, ಅಲ್ಲಿಗೆ ಕೊಪ್ಪ ವೃತ್ತ ನಿರೀಕ್ಷಕರು ಮತ್ತು ಇತರೆ ಪೊಲೀಸರು ಬಂದಿದ್ದಾಗಿ, ಅವರು ಅಲ್ಲಿ ಸೇರಿದ್ದವರನ್ನು ಮತ್ತು ತನ್ನನ್ನು ವಿಚಾರಿಸಿದ್ದಾಗಿ ಮತ್ತು ತನಿಖೆ ಮಾಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-20 ಪ್ರಾಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕ 16.11.2022 ರಂದು ಪೊಲೀಸರು ಮೃತ ಯಶೋಧಾಳ ಶವ ಪರೀಕ್ಷೆಯನ್ನು ನಡೆಸಲು ಸಹಕರಿಸುವಂತೆ ನಿಪಿ.7 ನೋಟೀಸನ್ನು ನೀಡಿದ್ದಾಗಿ ಮತ್ತು ಅದೇ ದಿನ ತನ್ನ ಸಮಕ್ಷಮ ನಿಪಿ.8 ರಂತೆ ಪೊಲೀಸರು ಪಂಚನಾಮೆಯನ್ನು ಜರುಗಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-21 ಪ್ರಾಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಯಶೋಧಾ ಮೃತಪಟ್ಟಿದ್ದರಿಂದ ಪೊಲೀಸರು enquiry ಮಾಡಿ ತನ್ನ ಸಹಿಗಳನ್ನು ಪಡೆದುಕೊಂಡಿದ್ದಾಗಿ, ಆ ಸಮಯದಲ್ಲಿ ತಾನು ಯಶೋಧಾಳ ಶವವನ್ನು ನೋಡಿದ್ದಾಗಿ, ಆಕೆಯ ಎಡಗಣ್ಣು ಕಪ್ಪಾಗಿದ್ದಾಗಿ ಮತ್ತು ಊದಿಕೊಂಡಿದ್ದಾಗಿ, ಮೂಗಿನ ಮೇಲೆ ರಕ್ತ ಹೆಪ್ಪು ಗಟ್ಟಿದ್ದಾಗಿ, ಆಕೆಯ ತಲೆಯ ಹಿಂಭಾಗದಲ್ಲಿ ಗಂಟಿನಂತೆ ಊದಿಕೊಂಡಿದ್ದಾಗಿ, ಆಕೆಯ ಬೆನ್ನಿನ ಮೇಲೆ ಕೋಲಿನಿಂದ

ಹೊಡೆದ ಗುರುತು ಇದ್ದುದ್ದಾಗಿ ಮತ್ತು ಆ ಭಾಗದಲ್ಲಿ ಊದಿಕೊಂಡಿದ್ದಾಗಿ, ಕುತ್ತಿಗೆಯ ಬಳಿ ಚರ್ಮ ಕಪ್ಪಗೆ ಆಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-22 ಫ್ರಾಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಯಶೋಧಾ ಆರೋಪಿಯಾದ ನಿನಗೆ ಬೇರೆಯವರೊಂದಿಗೆ ಸಂಬಂಧವಿದೆ ಎಂದು ಅನುಮಾನಪಡುತ್ತಿದ್ದರಿಂದ ಆಕೆ ಮೃತಪಡುವ ಹಿಂದಿನ ದಿನ ನೀನು ಕುಡಿದು ಬಂದು ಆಕೆಯೊಂದಿಗೆ ಗಲಾಟೆ ಮಾಡುತ್ತಿದ್ದಾಗಿ ನಿಮ್ಮ ಪಕ್ಕದ ಮನೆಯವರಿಂದ ತನಗೆ ತಿಳಿದಿದ್ದಾಗಿ, ಆ ಸಮಯದಲ್ಲಿ ಚಾಸಾ.13 ಸಹ ಇದ್ದುದ್ದಾಗಿ, ತಾನು ಆತನನ್ನು ವಿಚಾರಿಸಿದ್ದಾಗಿ, ಆಗ ಆತ ಹಿಂದಿನ ದಿನ ಆರೋಪಿಯಾದ ನೀನು ಮತ್ತು ಯಶೋಧಾ ಜಗಳ ಮಾಡಿಕೊಳ್ಳುತ್ತಿದ್ದಾಗಿ ನಂತರ ಆತ ಊಟ ಮಾಡಿ ಮಲಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-23 ಫ್ರಾಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಮಾರನೇ ದಿನ ಆತ ಎದ್ದು ನೋಡಿದಾಗ ಆತನ ತಾಯಿ ಮೃತಪಟ್ಟಿದ್ದಾಗಿ ತಿಳಿಸಿದನು ಎಂದು, ಆರೋಪಿಯಾದ ನೀನು ಯಶೋಧಾಳೊಂದಿಗೆ ಗಲಾಟೆ ಮಾಡಿ ಕೋಲಿನಿಂದ ಆಕೆಗೆ ಹೊಡೆದು ಕೊಂದಿರುವುದಾಗಿ ತಿಳಿದಿದ್ದಾಗಿ, ಸದರಿ ವಿಚಾರಗಳನ್ನು ತಾನು ಪೊಲೀಸರಿಗೆ ತಿಳಿಸಿದ್ದಾಗಿ, ಅಲ್ಲಿ ಪೊಲೀಸರು ಪಂಚನಾಮೆಯನ್ನು ಜರುಗಿಸಿ ಅದಕ್ಕೆ ತನ್ನ ಮತ್ತು ಚಾಸಾ.4 ಮತ್ತು ಚಾಸಾ.5 ರವರ ಸಹಿಗಳನ್ನು ಪಡೆದುಕೊಂಡಿದ್ದಾಗಿ, ಪಂಚನಾಮೆಯನ್ನು ಪೊಲೀಸರು ಮಧ್ಯಾಹ್ನ 2.30 ಗಂಟೆಯಿಂದ 4.00 ಗಂಟೆಯವರೆಗೆ ಜರುಗಿಸಿದ್ದಾಗಿ, ನಿಪಿ.3 ರಿಂದ ನಿಪಿ.6 ರಂತೆ ಫೋಟೋಗಳನ್ನು ತೆಗೆಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-24 ಫ್ರಾಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕ 17.11.2022 ರಂದು ಜಯಪುರ ಪೊಲೀಸರು ತನ್ನನ್ನು ತಮ್ಮ ಠಾಣೆಗೆ ಕರೆಸಿದ್ದಾಗಿ ಆ ದಿನ ತನ್ನೊಂದಿಗೆ ಚಾಸಾ.3 ಗಿರೀಶರವರು ಬಂದಿದ್ದಾಗಿ, ತಾವು ಅಲ್ಲಿಗೆ ಹೋದಾಗ ಸಮಯ ಬೆಳಿಗ್ಗೆ 8.30 ಗಂಟೆಯಾಗಿದ್ದಾಗಿ, ಆರೋಪಿಯಾದ ನೀನು ಯಶೋಧಾಳನ್ನು ಕೊಲೆ ಮಾಡಿದ್ದಾಗಿ ಒಪ್ಪಿಕೊಂಡಿರುವುದಾಗಿ ಹೇಳಿ ಸ್ಥಳ

ಪರಿಶೀಲನೆ ಮಾಡಿ ಮಹಜರ್ ಮಾಡಬೇಕಾಗಿದೆ ಅದಕ್ಕೆ ತಾವು ಬರಬೇಕು ಎಂದು ಪೊಲೀಸರು ತಮ್ಮನ್ನು ಕರೆದಿದ್ದಾಗಿ, ಅದಕ್ಕೆ ತಾವು ಒಪ್ಪಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-25 ಪ್ರಾಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕ 17.11.2022 ರಂದು ಪೊಲೀಸರು ಪಂಚನಾಮೆಗೆ ಸಹಕರಿಸುವಂತೆ ನಿಪಿ.9 ನೋಟೀಸನ್ನು ನೀಡಿದ್ದಾಗಿ ಮತ್ತು ನಿಪಿ.10 ರಂತೆ ಪಂಚನಾಮೆಯನ್ನು ಜರುಗಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-26 ಪ್ರಾಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಆ ಸಮಯದಲ್ಲಿ ಆರೋಪಿಯಾದ ನೀನು ಪೊಲೀಸರ ಸುಪರ್ದಿಯಲ್ಲಿ ಇದ್ದುದ್ದಾಗಿ, ತಾನು, ಚಾಸಾ.3, ಆರೋಪಿಯಾದ ನೀನು ಮತ್ತು ಪೊಲೀಸರು ಅವರ ಜೀಪಿನಲ್ಲಿ ಬೆಳಿಗ್ಗೆ 9.00 ಗಂಟೆಗೆ ಠಾಣೆಯಿಂದ ಹೊರಟಿದ್ದಾಗಿ, ಹೇರೂರು ಮಾರ್ಗವಾಗಿ ಬಸರೀಕಟ್ಟೆಗೆ ಹೋಗಿ ಅಲ್ಲಿಂದ 1 ರಿಂದ 1 ವರೆ ಕಿಲೋ ಮೀಟರ್ ದೂರದಲ್ಲಿದ್ದ ಹೊನ್ನಗುಂಡಿ ಗ್ರಾಮದಲ್ಲಿರುವ ಆರೋಪಿಯಾದ ನೀನು ಯಶೋಧಾಳೊಂದಿಗೆ ವಾಸವಿದ್ದ ಮನೆಗೆ ನೀನು ತೋರಿಸಿದ ಮಾರ್ಗದಲ್ಲಿ ಹೋಗಿದ್ದಾಗಿ, ತಾವು ಅಲ್ಲಿಗೆ ಹೋದಾಗ ಸಮಯ ಬೆಳಿಗ್ಗೆ 9.45 ರಿಂದ 10.00 ಗಂಟೆಯಾಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-27 ಪ್ರಾಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಆರೋಪಿಯಾದ ನೀನು ತಮ್ಮನ್ನು ಕರೆದುಕೊಂಡು ಹೋಗಿ ನಿನ್ನ ಮನೆಯ ಹತ್ತಿರ ಜೀಪನ್ನು ನಿಲ್ಲಿಸಿ ನಂತರ ನೀನು ನಿನ್ನ ಮನೆಯ ಒಳಗೆ ನಮ್ಮನ್ನು ಕರೆದುಕೊಂಡು ಹೋಗಿದ್ದಾಗಿ, ಅಲ್ಲಿ ಯಶೋಧಾ ಮೃತಪಟ್ಟಿದ್ದ ಸ್ಥಳವನ್ನು ತೋರಿಸಿದ್ದಾಗಿ, ನಂತರ ನಿಮ್ಮ ಮನೆಯ ಹಿಂಭಾಗದಲ್ಲಿದ್ದ ಕೊಟ್ಟಿಗೆಯ ಹತ್ತಿರ ತಮ್ಮನ್ನು ಕರೆದುಕೊಂಡು ಹೋಗಿ ಅಲ್ಲಿ ನಿಮ್ಮ ಮನೆಯ ನಾಯಿಯನ್ನು ಕಟ್ಟಿದ್ದ ಸ್ಥಳದ ಪಕ್ಕದಲ್ಲಿದ್ದ ಒಂದು ಕೋಲನ್ನು ತಂದು

ಪೊಲೀಸರಿಗೆ ಹಾಜರುಪಡಿಸಿ ಸದರಿ ಕೋಲಿನಿಂದ ನೀನು ಯಶೋಧಾಳನ್ನು ಹೊಡೆದು ಸಾಯಿಸಿದ್ದಾಗಿ ತಿಳಿಸಿದ್ದಾಗಿ, ಮು.ಮಾ.1 ಕೋಲನ್ನು ಪೊಲೀಸರು ಪ್ಯಾಕ್ ಮಾಡಿ ವಶಕ್ಕೆ ತೆಗೆದುಕೊಂಡು ಅದರ ಮೇಲೆ ತಮ್ಮ ಸಹಿಗಳಿರುವ ಚೀಟಿಯನ್ನು ಅಂಟಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-28 ಪ್ರಾಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಆರೋಪಿಯಾದ ನೀನು ನಿನ್ನ ವಾಸದ ಮನೆಯ ಮೊದಲನೇ ಕೋಣೆಯಲ್ಲಿದ್ದ ಮರದ ಟೇಬಲ್ ಮೇಲೆ ಸುತ್ತಿ ಇಟ್ಟಿದ್ದ ಒಂದು ಬೆಡ್ ಶೀಟನ್ನು ತಂದು ಪೊಲೀಸರಿಗೆ ಹಾಜರುಪಡಿಸಿದ್ದಾಗಿ, ಅದರ ಮೇಲೆ ರಕ್ತದ ಕಲೆಗಳು ಆಗಿದ್ದಾಗಿ, ರಕ್ತದ ಕಲೆಗಳು ನೀನು ಯಶೋಧಾಳಿಗೆ ಕೋಲಿನಿಂದ ಹೊಡೆದಾಗ ಆಕೆಗೆ ಗಾಯವಾಗಿ ರಕ್ತ ಬಂದು ಅದು ಬೆಡ್‌ಶೀಟಿಗೆ ತಾಗಿದ್ದರಿಂದ ಅದನ್ನು ಸುತ್ತಿ ಎತ್ತಿಟ್ಟಿದ್ದಾಗಿ ತಿಳಿಸಿದ್ದಾಗಿ, ಮು.ಮಾ.2 ಬೆಡ್ ಶೀಟಿನಲ್ಲಿ ರಕ್ತದ ಕಲೆಗಳಾಗಿದ್ದ ಭಾಗಗಳನ್ನು ಪೊಲೀಸರು ಕತ್ತರಿಸಿ ಪ್ಯಾಕ್ ಮಾಡಿ ತಮ್ಮ ಸಹಿ ಇರುವ ಚೀಟಿಯನ್ನು ಅಂಟಿಸಿ ವಶಕ್ಕೆ ತೆಗೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-29 ಪ್ರಾಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಸದರಿ ರೂಮಿನಲ್ಲಿ ಬಟ್ಟೆಗಳನ್ನು ಇಡುವ ಜಾಗದಿಂದ ಆರೋಪಿಯಾದ ನೀನು ಒಂದು ಬೂದು ಬಣ್ಣದ ಜೀನ್ಸ್ ಪ್ಯಾಂಟ್ ಮತ್ತು ಒಂದು ನೀಲಿ ಬಣ್ಣದ ತುಂಬು ತೋಳಿನ ಶರ್ಟನ್ನು ಪೊಲೀಸರಿಗೆ ತಮ್ಮ ಸಮಕ್ಷಮ ಹಾಜರುಪಡಿಸಿದ್ದಾಗಿ ಅವುಗಳನ್ನು ನೀನು ಯಶೋಧಾಳನ್ನು ಕೋಲಿನಿಂದ ಹೊಡೆದು ಸಾಯಿಸುವಾಗ ಧರಿಸಿದ್ದಾಗಿ ತಿಳಿಸಿದೆ ಎಂದು, ಮು.ಮಾ.3 ಪ್ಯಾಂಟು ಮತ್ತು ಮು.ಮಾ.4 ಶರ್ಟನ್ನು ಪೊಲೀಸರು ತಮ್ಮ ಸಮಕ್ಷಮ ಪ್ರತ್ಯೇಕವಾಗಿ ಪ್ಯಾಕ್ ಮಾಡಿ ಅವುಗಳ ಮೇಲೆ ತಮ್ಮ ಸಹಿಗಳಿರುವ ಚೀಟಿಯನ್ನು ಅಂಟಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-30 ಪ್ರಾಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನಂತರ ಆರೋಪಿಯಾದ ನೀನು ಮೂರು ರಗ್ಗುಗಳನ್ನು ಪೊಲೀಸರಿಗೆ ತಮ್ಮ ಸಮಕ್ಷಮ ಹಾಜರುಪಡಿಸಿ ಅವುಗಳನ್ನು ಕೃತ್ಯಕ್ಕೆ ಬಳಸಿದ್ದಾಗಿ ತಿಳಿಸಿದೆ ಎಂದು, ಮು.ಮಾ.5 ರಿಂದ ಮು.ಮಾ.7 ರಗ್ಗುಗಳ ಪೀಸುಗಳನ್ನು ಕತ್ತರಿಸಿ ಪೊಲೀಸರು ತಮ್ಮ ಸಮಕ್ಷಮ ಪ್ರತ್ಯೇಕವಾಗಿ ಪ್ಯಾಕ್ ಮಾಡಿ ಅವುಗಳ ಮೇಲೆ ತಮ್ಮ ಸಹಿಗಳಿರುವ ಚೀಟಿಯನ್ನು ಅಂಟಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-31 ಪ್ರಾಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನಂತರ ಆರೋಪಿಯಾದ ನೀನು ಒಂದು ಒಳಲಂಗವನ್ನು ಪೊಲೀಸರಿಗೆ ತಮ್ಮ ಸಮಕ್ಷಮ ಹಾಜರುಪಡಿಸಿ ಅದನ್ನು ಯಶೋಧಾ ಕೃತ್ಯ ನಡೆಯುವ ಸಮಯದಲ್ಲಿ ಧರಿಸಿದ್ದಾಗಿ ತಿಳಿಸಿದೆ ಎಂದು, ಮು.ಮಾ.8 ಲಂಗದ ಮೇಲೆ ಅಲ್ಲಲ್ಲಿ ರಕ್ತದ ಕಲೆಗಳಾಗಿದ್ದಾಗಿ, ಸದರಿ ಲಂಗದಲ್ಲಿ ರಕ್ತದ ಕಲೆಗಳಾಗಿದ್ದ ಭಾಗವನ್ನು ಕತ್ತರಿಸಿ ಅದನ್ನು ಪೊಲೀಸರು ತಮ್ಮ ಸಮಕ್ಷಮ ಪ್ಯಾಕ್ ಮಾಡಿ ಅದರ ಮೇಲೆ ತಮ್ಮ ಸಹಿಯಿರುವ ಚೀಟಿಯನ್ನು ಅಂಟಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-32 ಪ್ರಾಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಆ ಬಗ್ಗೆ ಪೊಲೀಸರು ಬೆಳಿಗ್ಗೆ 10.00 ಗಂಟೆಯಿಂದ ಮಧ್ಯಾಹ್ನ 3.00 ಗಂಟೆಯವರೆಗೆ ಮಹಜರ್ ಮಾಡಿಕೊಂಡಿದ್ದಾಗಿ, ನಿಪಿ.11 ರಿಂದ ನಿಪಿ.20 ಪೋಟೋಗಳನ್ನು ತೆಗೆದುಕೊಂಡಿದ್ದಾಗಿ, ಸದರಿ ಫೋಟೋಗಳ ಪೈಕಿ ನಿಪಿ.12, ನಿಪಿ.14, ನಿಪಿ.15, ನಿಪಿ.16, ನಿಪಿ.19 ಫೋಟೋಗಳಲ್ಲಿ ತನ್ನ ಮತ್ತು ಚಾಸಾ.3 ಮತ್ತು ಆರೋಪಿಯಾದ ನೀನು ಇದ್ದುದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-33 ಪ್ರಾಸಾ.4 ಸತೀಶ್, ಇವರು ತಮ್ಮ ಸಾಕ್ಷ್ಯದಲ್ಲಿ ತನ್ನ ತಾಯಿಗೆ ಒಟ್ಟು 4 ಜನ ಅಕ್ಕತಂಗಿಯರಿದ್ದುದ್ದಾಗಿ, ಅವರ ಪೈಕಿ ಮೃತ ಯಶೋಧ ನಾಲ್ಕನೆಯವರಾಗಿದ್ದಾಗಿ, ಯಶೋಧ ಮೃತ ಪಡುವ 30 ವರ್ಷಗಳ ಹಿಂದೆ ಆಕೆಯ ಮದುವೆ ರಮೇಶ್

ಎಂಬುವವರ ಜೊತೆ ನಡೆದಿದ್ದಾಗಿ, ಅವರಿಗೆ ಪ್ರಾ.ಸಾ.1 ಜನಿಸಿದ್ದಾಗಿ, ಪ್ರಾ.ಸಾ.1 ರವರಿಗೆ ಒಂದು ವರ್ಷವಾಗಿದ್ದಾಗ ರಮೇಶ್‌ರವರು ಮೃತಪಟ್ಟಿದ್ದಾಗಿ, ನಂತರ ಯಶೋಧ ಹೊನ್ನಗುಂಡಿಯಲ್ಲಿರುವ ನೀಲಿಖಾನ್ ಎಸ್ಟೇಟಿನಲ್ಲಿ ಕೂಲಿ ಕೆಲಸ ಮಾಡಿಕೊಂಡು ತನ್ನ ಮಗನಾದ ಪ್ರಾ.ಸಾ.1 ರವರೊಂದಿಗೆ ಅಲ್ಲಿಯೇ ವಾಸವಾಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-34 ಪ್ರಾ.ಸಾ.4 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಯಶೋದ ಮೃತ ಪಡುವ 10 ರಿಂದ 11 ವರ್ಷಗಳ ಹಿಂದೆ ಆಕೆ ಮತ್ತು ಆರೋಪಿಯಾದ ನೀನು ಪ್ರೀತಿಸಿ ಮದುವೆಯಾಗಿದ್ದಾಗಿ, ಆರೋಪಿಯಾದ ನೀನು ಯಶೋಧರನ್ನು ಮದುವೆ ಮಾಡಿಕೊಂಡ ಬಳಿಕ ಪ್ರಾ.ಸಾ.1 ಆಕೆಯನ್ನು ಬಿಟ್ಟು ಹಾಂದಿಯಲ್ಲಿ ಇರುವ ಎಸ್ಟೇಟಿನಲ್ಲಿ ಕೂಲಿ ಕೆಲಸ ಮಾಡಿಕೊಂಡು ಅಲ್ಲಿಯೇ ವಾಸವಾಗಿದ್ದಾಗಿ, ಯಶೋದ ಆರೋಪಿಯಾದ ನಿನ್ನನ್ನು ಮದುವೆ ಮಾಡಿಕೊಂಡ ಬಳಿಕ ನಿನ್ನೊಂದಿಗೆ ಹೊನ್ನಗುಂಡಿಯಲ್ಲಿರುವ ನಿನ್ನ ಮನೆಯಲ್ಲಿ ವಾಸವಾಗಿದ್ದಾಗಿ, ಆರೋಪಿಯಾದ ನಿನಗೆ ಮತ್ತು ಯಶೋಧಾಳಿಗೆ ಪ್ರಾ.ಸಾ.3 ಧನುಶ್ ಎಂಬ ಮಗನಿದ್ದುದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-35 ಪ್ರಾ.ಸಾ.4 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಯಶೋದ ಆರೋಪಿಯಾದ ನಿನ್ನನ್ನು ಮದುವೆ ಮಾಡಿಕೊಂಡ ಬಳಿಕ ಪ್ರಾ.ಸಾ.1 ರವರು ಯಶೋದಳಿಗೆ ಆಗಾಗ್ಗೆ ಪೋನ್ ಮಾಡಿ ವಿಚಾರಿಸುತ್ತಿದ್ದುದ್ದಾಗಿ ಮತ್ತು ಅವರು ಹೇಗೆ ಇದ್ದಾರೆ ಎಂದು ತನಗೆ ಪ್ರಾ.ಸಾ.1 ರವರಿಂದ ತಿಳಿಯುತ್ತಿದ್ದುದ್ದಾಗಿ, ದಿ.16.11.2022 ರಂದು ತಾನು ಅಂದಗಾರಿನಲ್ಲಿ ಇರುವ ತಮ್ಮ ಮನೆಯಲ್ಲಿ ಇದ್ದುದ್ದಾಗಿ, ಆಗ ಬೆಳಗ್ಗೆ 8-30 ಗಂಟೆ ಸುಮಾರಿಗೆ ಚಾಸಾ.11 ರವಿರವರು ತನಗೆ ಪೋನ್ ಮಾಡಿ ಯಶೋಧರವರು ಹೊನ್ನಗುಂಡಿಯಲ್ಲಿ ಮೃತಪಟ್ಟಿರುವುದಾಗಿ ತಿಳಿಸಿದ್ದಾಗಿ, ನಂತರ ತಾನು, ಚಾಸಾ.10 ಮತ್ತು ಚಾಸಾ.8 ರವರು ಅದೇ ದಿನ ಹೊನ್ನಗುಂಡಿಯಲ್ಲಿರುವ ಆರೋಪಿಯಾದ ನಿನ್ನ ಮನೆಗೆ ಹೋಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-36 ಫ್ರಾಸಾ.4 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಅಲ್ಲಿ ಆರೋಪಿಯಾದ ನೀನು ಅಕ್ಕಪಕ್ಕದ ಮನೆಯವರು ಇದ್ದುದ್ದಾಗಿ, ಅಲ್ಲಿಗೆ ಜಯಪುರ ಪೋಲೀಸರು ಬಂದಿದ್ದಾಗಿ, ಆರೋಪಿಯಾದ ನಿನ್ನ ಮನೆಯಲ್ಲಿರುವ ಮೊದಲನೇ ರೂಮಿನಲ್ಲಿ ಯಶೋದಳ ಶವ ಇದ್ದುದ್ದಾಗಿ, ತಾನು ನೋಡಿದಾಗ ಯಶೋದಳ ಮೂಗಿಗೆ ಪೆಟ್ಟಾಗಿ ರಕ್ತ ಬಂದು ಹೆಪ್ಪುಗಟ್ಟಿದ್ದಾಗಿ, ಆಕೆಯ ಎಡಗಣ್ಣಿನ ಸುತ್ತು ಕಪ್ಪಗಾಗಿದ್ದಾಗಿ, ಆಕೆಯ ತಲೆಯ ಹಿಂಬಾಗದಲ್ಲಿ ಪೆಟ್ಟಾಗಿದ್ದಾಗಿ, ಆಕೆಯ ಕುತ್ತಿಗೆಯ ಭಾಗ ಕಪ್ಪಾಗಿದ್ದಾಗಿ, ಅಲ್ಲಿ ಫ್ರಾಸಾ.3 ಇದ್ದುದ್ದಾಗಿ, ಆತನನ್ನು ಕುರಿತು ಏನಾಯಿತು ಎಂದು ತಾನು ಕೇಳಿದಾಗ ಫ್ರಾಸಾ.3 ರವರು ಹಿಂದಿನ ದಿನ ಅಂದರೆ ದಿ.15.11.2022 ರ ರಾತ್ರಿ ಯಶೋದ ಮತ್ತು ಆರೋಪಿಯಾದ ನೀನು ಗಲಾಟೆ ಮಾಡಿಕೊಳ್ಳುತ್ತಿದ್ದುದ್ದಾಗಿ ಆಗ ಆತ ಯಶೋಧಾಳಿಗೆ ಬಿ.ಪಿ. ಮಾತ್ರೆಯನ್ನು ಕೊಟ್ಟಿದ್ದಾಗಿ ಆಕೆ ಅದನ್ನು ನುಂಗಿ ಮಲಗಿಕೊಂಡಿದ್ದಾಗಿ ತಿಳಿಸಿದನು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-37 ಫ್ರಾಸಾ.4 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಮಾರನೆ ದಿನ ಫ್ರಾಸಾ.3 ರವರು ಎದ್ದು ಯಶೋದಳನ್ನು ಎಬ್ಬಿಸಿದಾಗ ಆಕೆ ಎಚ್ಚರಗೊಳ್ಳದಿದ್ದಾಗ ಅಕ್ಕಪಕ್ಕದವರನ್ನು ಕರೆದಿದ್ದಾಗಿ ಫ್ರಾಸಾ.3 ತನಗೆ ತಿಳಿಸಿದ್ದಾಗಿ, ಆರೋಪಿಯಾದ ನೀನು ಮತ್ತು ಯಶೋದಳ ಅಕ್ಕಪಕ್ಕದ ಮನೆಯವರು ಹಿಂದಿನ ದಿನ ರಾತ್ರಿ ಆರೋಪಿಯಾದ ನೀನು ಮತ್ತು ಯೆಶೋಧಾಳ ನಡುವ ಗಲಾಟೆಯಾಗುತ್ತಿದ್ದಾಗಿ ಮಾತನಾಡಿಕೊಳ್ಳುತ್ತಿದ್ದರು ಎಂದುಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-38 ಫ್ರಾಸಾ.4 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಜಯಪುರ ಪೋಲೀಸರು ತನ್ನನ್ನು ಯಶೋಧಾಳ ಸಾವಿನ ಬಗ್ಗೆ ವಿಚಾರಿಸಿದ್ದಾಗಿ, ಆಗ ತಾನು ಆ ಬಗ್ಗೆ ಮೇಲೆ ಹೇಳಿದಂತೆ ತನಗೆ ಗೊತ್ತಿದ್ದ ವಿಚಾರವನ್ನು ತಿಳಿಸಿ ಹೇಳಿಕೆ ನೀಡಿರುತ್ತೇನೆ ಎಂದು, ಮೇಲೆ ಹೇಳಿದಂತ ಗಾಯಗಳು ಯಶೋದಾಳ ಶವದ ಮೇಲೆ ಕಂಡು ಬಂದಿದ್ದರಿಂದ ಆರೋಪಿಯಾದ ನೀನೇ ಆಕೆಯ ಕತ್ತನ್ನು ಹಿಸುಕಿ ಮತ್ತು ಹೊಡೆದು ಕೊಲೆ ಮಾಡಿರಬಹುದು ಎಂದು

ಆಕೆಯ ಸಾವಿನ ಬಗ್ಗೆ ಪೋಲೀಸರಿಗೆ ತಿಳಿಸಿದ್ದಾಗಿ, ನಿಪಿ.3 ಮತ್ತು 4 ಪೋಟೋಗಳಲ್ಲಿ ಯಶೋಧಾಳ ಶವ ಮತ್ತು ಆಕೆ ಮೈಮೇಲೆ ತಾನು ಮೇಲೆ ಹೇಳಿದಂತಹ ಗಾಯಗಳು ಕಂಡು ಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-39 ಪ್ರಾಸಾ.4 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಅದಾದ 2 ತಿಂಗಳ ನಂತರ ತಾನು ಜಯಪುರ ಪೋಲೀಸ್ ಠಾಣೆಗೆ ಯೆಶೋದಾಳ ಸಾವಿನ ಬಗ್ಗೆ ತಿಳಿದುಕೊಳ್ಳಲು ಹೋಗಿದ್ದಾಗಿ, ಅಲ್ಲಿಗೆ ಹೋದಾಗ ಯಶೋದಾಳ ಮರಣೋತ್ತರ ಪರೀಕ್ಷಾ ವರದಿಯಲ್ಲಿ ಆಕೆಯನ್ನು ಆಕೆಯ ಕತ್ತನ್ನು ಹಿಸುಕಿ ಸಾಯಿಸಿರುವುದಾಗಿ ವರದಿ ಬಂದಿರುವುದಾಗಿ ಪೋಲೀಸರಿಂದ ತಿಳಿದಿದ್ದಾಗಿ, ಆ ಬಗ್ಗೆ ತಾನು ಪೋಲೀಸರಿಗೆ ಪುನಃ ಹೇಳಿಕೆಯನ್ನು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-40 ಪ್ರಾಸಾ.5 ಪ್ರಶಾಂತ್ ಕುಮಾರ್, ಅಸಿಸ್ಟೆಂಟ್ ಇಂಜಿನಿಯರ್, ಮೆಸ್ಕಾಂ, ಇವರು ತಮ್ಮ ಸಾಕ್ಷ್ಯದಲ್ಲಿ ದಿ.18.11.2022 ರಂದು ಕೊಪ್ಪ ವೃತ್ತ ನಿರೀಕ್ಷಕರು ಜಯಪುರ ಪೋಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆಃ50/2022 ಕ್ಕೆ ಸಂಬಂಧಿಸಿದಂತೆ ಹೊನ್ನಗುಂಡಿ ಗ್ರಾಮದಲ್ಲಿರುವ ಮನೆಗೆ ಅಳವಡಿಸಿರುವ ವಿದ್ಯುತ್ ಮೀಟರ್ ಬೊರ್ಡ್‌ನ ಸೀರಿಯಲ್ ನಂಬರ್.11479397 ಕ್ಕೆ ಸಂಬಂಧಿಸಿದ ಬಳಕೆದಾರರ ಮಾಹಿತಿಯನ್ನು ನೀಡುವಂತೆ ನಿಪಿ.23 ರಂತೆ ಮನವಿ ಸಲ್ಲಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-41 ಪ್ರಾಸಾ.5 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನಿಪಿ.23 ಮನವಿಯ ಮೇರೆಗೆ ಸದರಿ ಬೋರ್ಡನ್ನು ಅಳವಡಿಸಿದ್ದ ಸ್ಥಳಕ್ಕೆ ಭೇಟಿ ನೀಡಿ ಅದನ್ನು ಪರಿಶೀಲಿಸಿ ಮತ್ತು ತಮ್ಮ ಕಛೇರಿಯಲ್ಲಿದ್ದ ದಾಖಲೆಗಳನ್ನು ಪರಿಶೀಲಿಸಿ ನೋಡಲಾಗಿ ದಿ.16.11.2022 ರಂದು ಸದರಿ ಮನೆಗೆ ಅಳವಡಿಸಿದ್ದ ವಿದ್ಯುತ್ ಮೀಟರ್ ಬೋರ್ಡ್ ಸಂಖ್ಯೆಃ RGJRL 4961 ಆಗಿದ್ದು ಅದು ಶ್ರೀಮತಿ ಜಾನಕಿ ಕೋಂ ಗುರುವ, ಸೋಮೇಶ್ವರ ಖಾನ್ ಎಸ್ಟೇಟ್

ಬಸರೀ ಕಟ್ಟೆ ಎಂದು ನಮೂದಾಗಿದ್ದಾಗಿ, ನಿಪಿ.23 ರಲ್ಲಿ ಪೋಲೀಸರು ಸಲ್ಲಿಸಿದ್ದ ಮನವಿಯಲ್ಲಿ ನಮೂದಿಸಿದ್ದ ಸಂಖ್ಯೆ ಮೀಟರ್ ಬೊರ್ಡಿನ ಮೇಲೆ ಇದ್ದ ಸೀರಿಯಲ್ ನಂಬರ್ ಆಗಿದ್ದಾಗಿ, ತಾನು ಮೇಲೆ ಹೇಳಿದ ಸಂಖ್ಯೆ ರೆವೆನ್ಯೂ ರಿಜಿಸ್ಟರ್ ಸಂಖ್ಯೆಯಾಗಿದ್ದಾಗಿ, ಆ ಬಗ್ಗ ತಾನು ದಿ.23.11.2022 ರಂದು ಸಂಬಂಧಿಸಿದ ಪೋಲೀಸರಿಗೆ ನಿಪಿ.24 ರಂತೆ ವರದಿಯನ್ನು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-42 ಪ್ರಾಸಾ.5 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನಿಪಿ.11 ಮತ್ತು ನಿಪಿ.12 ಪೋಟೋಗಳಲ್ಲಿ ತಾನು ಮೇಲೆ ಹೇಳಿದಂತೆ ಭೇಟಿ ನೀಡಿದ ಮನೆ ಮತ್ತು ತಾನು ಪರಿಶೀಲಿಸಿದ ಮೀಟರ್ ಬೋರ್ಡ್ ಕಂಡು ಬಂದಿದ್ದಾಗಿ, ನಂತರ ದಿ.10.02.2022 ರಂದು ಕೊಪ್ಪ ವೃತ್ತ ನಿರೀಕ್ಷಕರು ಮೇಲೆ ಹೇಳಿದ ಪ್ರಕರಣಕ್ಕೆ ಸಂಬಂಧಿಸಿದಂತೆ ದಿ.15.11.2022 ರಂದು ರಾತ್ರಿ 7.00 ಗಂಟೆಯಿಂದ ದಿ.16.11.2022 ರ ಬೆಳಗ್ಗೆ 6 ಗಂಟೆಯ ವರೆಗೆ ಮೇಲೆ ಹೇಳಿದ ವಾಸದ ಮನೆಯಲ್ಲಿ ವಿದ್ಯುತ್ ಸರಬರಾಜು ಆಗುತ್ತಿತ್ತೇ ಎಂಬುದರ ಬಗ್ಗೆ ಮಾಹಿತಿ ನೀಡಲು ನಿಪಿ.25 ರಂತೆ ಮನವಿ ಸಲ್ಲಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-43 ಪ್ರಾಸಾ.5 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನಿಪಿ.25 ಮನವಿಯ ಮೇರೆಗೆ ತಮ್ಮ ಉಪ ಕೇಂದ್ರದಲ್ಲಿ ಇದ್ದ ಲಾಗ್ ಪುಸ್ತಕವನ್ನು ಪರಿಶೀಲಿಸಿ ಮತ್ತು ಸಂಬಂಧಿಸಿದ ಲೈನ್ ಮೆನ್ ನ್ನು ವಿಚಾರಿಸಿ ದಿ.15.11.2022 ರಂದು ರಾತ್ರಿ 7.00 ಗಂಟೆಯಿಂದ ದಿ.16.11.2022 ರ ಬೆಳಗ್ಗೆ 6 ಗಂಟೆಯವರೆಗೆ ಸದರಿ ಮನೆಯಲ್ಲಿ ವಿದ್ಯುತ್ ಸಂಪರ್ಕವಿತ್ತು ಎಂದು ತಿಳಿಸಿ ಆ ಬಗ್ಗೆ ದಿ.11.02.2023 ರಂದು ಸದರಿ ಪೋಲೀಸರಿಗೆ ನಿಪಿ.26 ರಂತೆ ವರದಿಯನ್ನು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

Q-44 PW.6 Geethalaxmi P., Assistant Director, RFSL, Mangaluru deposed that on 30.11.2012, 9 sealed articles pertaining to Crime No.50/2022 of Jayapura P.S were received in their laboratory for examination through P.C.Raghunaiak of said Police Station along with requisition of investigating officer and the same were forwarded to her for examination. What do you say?

Ans: False

Q-45 PW.6 further deposed that the seals found on said articles were intact and tallied with the sample seal sent by the Investigating Officer, she opened the said articles for examination and the description found on the articles were corresponding to the description made in the invoice. What do you say?

Ans: False

Q-46 PW.6 further deposed that on opening, she found following articles:-

1.One petticoat piece.
2.One Jeans pant.
3.One Shirt.
4.One Bedsheet piece.
5.One nighty.
6.one Langa.
7.One Panty.
8.Blood in gauze.
9. Blood sample. What do you say?

Ans: False

Q-47 PW.6 further deposed that the specimen scraping/cuttings from the suspected areas on

the aforesaid 9 articles were tested for blood using presumptive tests namely benzidine/phenophthalein/leuco-Malachite-Green tests. What do you say?

Ans: False

Q-48 PW.6 further deposed that further the presence of blood stains was also confirmed by conducting takayama crystal test, the presence of blood stains was detected on article No.1,2,4 to 4 and 8 and the nature of stains and their extent, size and location were also mentioned in the report. What do you say?

Ans: False

Q-49 PW.6 further deposed that the specimen cuttings/scrapings of the blood stained articles were subjected to serological analysis and the origin was determined by GEL Diffusion method, cross over Electrophoresis and the blood grouping was determined by the absorption elution method. Item No.1,2,4 to 4 and 8. were stained with human blood. The group of blood stains in said article could not be determined as the results of the test were inconclusive. The blood stains in item No.8 and 11 were disintegrated and as such their origin and group could not be determined. The article No.9 with I.O. marking NO.11 was sent to toxicology section for further examination. What do you say?

Ans: False

Q-50 PW.6 further deposed that in this regard, she issued report through their Deputy Director to the Investigating Officer, after examination, she

repacked those articles and sealed the same with sample seal of RFSL, Mangaluru and handed over the same to the concerned Police as per Ex.P.27. What do you say?

Ans: False

Q-51 PW.6 further deposed that as per Ex.P.27 the specimen seal impression of RFSL Mangaluru is already marked, she can identify the articles examined by her as she had put BS number as BS No.390/2022, her short signature and round seal of their office on the slips affixed on the said articles. What do you say?

Ans: False

Q-52 PW.6 further deposed that she saw said articles, which were examined by her and her small signature is found on the slips affixed on the cloth bags containing said articles and she also saw round seal of their office on the said slips with BS No.390/2022 as per MO.8,3,4 and 2. One nighty,one Langa, one Panty and Blood in gauze are marked as M.O.9 to M.O.12 respectively. What do you say?

Ans: False

Q-53 PW.7 Karthik, Scientif Officer, State Forensic Science Laboratory, Bengaluru deposed that on 02.12.2022, 7 sealed articles pertaining to Crime No.50/2022 of Jayapura P.S were received in their laboratory for examination through P.C. Mahesh of said Police Station along with requisition of investigating officer and the same were forwarded to him for examination. What do you say?

Ans: False

Q-54 PW.7 further deposed that he opened the said articles for examination and the description found on the articles were corresponding to the description made in the invoice. On opening, he found one sealed envelope said to contain two rug pieces of black, green and red colour, one sealed envelope said to contain a rug piece of red colour, one sealed envelope said to contain a rug piece of blue colour, one sealed envelope said to contain cellophane lifting's collected from right side of the neck, one sealed envelope said to contain cellophane lifting's collected from the left side of the neck, one sealed envelope said to contain cellophane lifting's collected from front side of the neck, one sealed envelope said to contain control cellophane lifting's. What do you say?

Ans: False

Q-55 PW.7 further deposed that on opening, in article No.1 I noted two rug pieces of black, green and brown colour. In article No.2 he found a rug piece of red and white colour. In article No.3 he found a rug piece of blue colour. In article No.6 of I.O. marking he found a glass slide with transparent adhesive tape sticking to it. In article No.7 of I.O. marking he found a glass slide with transparent adhesive tape sticking to it. In article No.8 of I.O. marking he found a glass slide with transparent adhesive tape sticking to it. In article No.9 of I.O. marking he found a glass slide with transparent adhesive tape sticking to it. What do you say?

Ans: False

Q-56 PW.7 further deposed that he had subjected said articles to microscopic examination, physical measurement and visual observation. On the basis of the examination, he was of the opinion that, the cellophane lifting's marked as article No.6,7 and 8 contained cloth fibers, the cellophane lifting's marked as article No.9 does not contain any cloth fibers, the black, white and light blue fibers found in cellophane lifting's marked as article number 6 are similar to the black, white, light blue fibers collected from rug pieces marked as article No.1, the black and white fibers in cellophane lifting's marked as article No.7,8 are similar to the black, white fibers collected from rug pieces marked as article No.1, the red fibers found in cellophane tape lifting's marked as articles No.6,7,8 are similar to the red fibers collected from rug piece marked as articles No.2, the blue fibers found in cellophane tape lifting's marked as articles No.6,7,8 are similar to the blue fibers collected from rug piece as articles No.3. What do you say?

Ans: False

Q-57 PW.7 further deposed that in the said regard he issued report on 09.12.2022 as per Ex.P.28. After examination I repacked said articles and sealed the same and handed over to the concerned police. Two rug pieces of black , green and red colour and the same are together marked as M.O. 5. 2 pieces of rug of red and blur colour and same are marked as MO 6 and 7. Glass slights with transparent adhesive take said to have been lifted from the

right side of the neck, left side of the neck and front side of the neck, and control cellophane lifting. The same are marked as M.O. 13 to 16 respectively. What do you say?

Ans: False

ಪ್ರಶ್ನೆ-58 ಪ್ರಾ.ಸಾ.8 ಕಿರಣ್ ಕುಮಾರ್, ಆರಕ್ಷಕ ಉಪನಿರೀಕ್ಷಕರು, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 16.11.2022 ರಂದು ತಾನು ಠಾಣೆಯಲ್ಲಿದ್ದ ಸಮಯದಲ್ಲಿ ಮ.12.30 ಗಂಟೆಗೆ ಪ್ರಾ.ಸಾ.1 ರವರು ಠಾಣೆಗೆ ಹಾಜರಾಗಿ ನೀಡಿದ ನಿಪಿ.1 ಲಿಖಿತ ದೂರನ್ನು ಪಡೆದು ಠಾಣಾ ಮೊಕದ್ದಮೆ ಸಂಖ್ಯೆಃ 50/2022 ರಂತೆ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿದ್ದಾಗಿ, ನಿಪಿ.2 ಪ್ರಥಮ ವರ್ತಮಾನ ವರದಿಯನ್ನು ದಾಖಲು ಮಾಡಿದ್ದಾಗಿ, ಪ್ರಕರಣವು ಘೋರ ಅಪರಾಧವನ್ನು ಒಳಗೊಂಡಿದ್ದರಿಂದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ.40 ರವರಿಗೆ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-59 ಪ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಅದೇ ದಿನ ಚಾಸಾ.40 ರವರು ಆರೋಪಿಯಾದ ನಿನ್ನ ಪತ್ತೆ ಹಚ್ಚುವಂತೆ ಮೌಖಿಕವಾಗಿ ಆದೇಶಿಸಿದ್ದಾಗಿ, ಅದರಂತೆ ತಾನು ಅದೇ ದಿನ ರಾತ್ರಿ 9.15 ಗಂಟೆಗೆ ತಾನು ಆರೋಪಿಯಾದ ನಿನ್ನನ್ನು ಬಸರೀಕಟ್ಟೆ ಸಮೀಪದ ಎಂ.ಎಸ್ ಎಸ್ಟೇಟಿನ ಕೂಲಿ ಲೈನ್ ರಸ್ತೆಯಲ್ಲಿ ವಶಕ್ಕೆ ಪಡೆದು, ಅದೇ ದಿನ ರಾತ್ರಿ 9.45 ಗಂಟೆಗೆ ನಿನನ್ನು ಚಾಸಾ.40 ರವರ ಮುಂದೆ ಹಾಜರುಪಡಿಸಿ ನಿಪಿ.29 ವರದಿ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-60 ಪ್ರಾ.ಸಾ.9 ಮಂಜು ಜೆ., ಸಿ.ಪಿ.ಐ. ಕೊಪ್ಪ ವೃತ್ತ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 16-11-2022 ರಂದು ಪ್ರಾ.ಸಾ.**8** ರವರಿಂದ ಈ ಪ್ರಕರಣದ ಕಡತವನ್ನು ಪಡೆದು ಪರಿಶೀಲಿಸಿದ್ದಾಗಿ, ಅದೇ ದಿನ ಹೊನ್ನಗುಂಡಿಯಲ್ಲಿ ಮೃತ ಯಶೋಧ ಮತ್ತು ಆರೋಪಿಯಾದ ನೀನು ವಾಸವಿದ್ದ ಮನೆಯಲ್ಲಿ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದ್ದಾಗಿ, ಯಶೋಧಾಳ ಶವ ಸದರಿ ಸ್ಥಳದಲ್ಲಿ

ಇರುವುದು ಕಂಡು ಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-61 ಪ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಪ್ರಾ.ಸಾ.2,ಚಾಸಾ.4 ಮತ್ತು ಚಾಸಾ.5 ರವರಿಗೆ ನಿಪಿ.7 ರಂತೆ ನೋಟೀಸನ್ನು ಜಾರಿ ಮಾಡಿ ಪಂಚರನ್ನಾಗಿ ಬರಮಾಡಿಕೊಂಡಿದ್ದಾಗಿ, ಸದರಿ ಪಂಚರ ಸಮಕ್ಷಮ ಮೃತ ಯಶೋಧಾಳ ಶವತನಿಕೆಯನ್ನು ನಿಪಿ.8 ರಂತೆ ನಡೆಸಿ ಮ.2.30 ಗಂಟೆಯಿಂದ ಸಂಜೆ 4.00 ಗಂಟೆಯ ವರೆಗೆ ಶವಪಂಚನಾಮೆಯನ್ನು ಜರುಗಿಸಿದ್ದಾಗಿ, ಶವದ ಮೈಮೇಲೆ ಕಂಡು ಬಂದಂತಹ ಗಾಯದ ಗುರುತನ್ನು ಪಂಚನಾಮೆಯಲ್ಲಿ ನಮೂದಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-62 ಪ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಸದರಿ ಪಂಚನಾಮೆಯ ಕಾಲಕ್ಕೆ ನಿಪಿ.3 ರಿಂದ 6 ರಂತೆ ಫೋಟೋಗಳನ್ನು ತೆಗೆಸಿದ್ದಾಗಿ ಮತ್ತು ರಕ್ತ ಸಂಬಂಧಿಕರಾದ ಚಾಸಾ.8, ಪ್ರಾ.ಸಾ.9 ಮತ್ತು ಇತರೆ ಸಾಕ್ಷಿದಾರರಾದ ಚಾಸಾ.10 ರಿಂದ ಚಾಸಾ.12 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದಾಗಿ, ಶವವನ್ನು ಸಿಬ್ಬಂದಿಯ ಬೆಂಗಾವಲಿನಲ್ಲಿ ಮರಣೋತ್ತರ ಪರೀಕ್ಷೆಗಾಗಿ ಚಿಕ್ಕಮಗಳೂರು ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದಾಗಿ, ಅದೇ ದಿನ ಪ್ರಾ.ಸಾ.8 ರವರು ಆರೋಪಿಯಾದ ನಿನ್ನನ್ನು ವಶಕ್ಕೆ ಪಡೆದು ರಾತ್ರಿ 9.45 ಗಂಟೆಗೆ ತನ್ನ ಮುಂದೆ ಹಾಜರುಪಡಿಸಿ ನಿಪಿ.29 ರಂತೆ ವರದಿ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-63 ಪ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಆರೋಪಿಯಾದ ನಿನ್ನನ್ನು ವಿಚಾರಣೆಗೆ ಒಳಪಡಿಸಿ, ದಸ್ತಗಿರಿ ಕ್ರಮ ಅನುಸರಿಸಿ ನಿನ್ನ ಸ್ವಇಚ್ಚಾ ಹೇಳಿಕೆಯನ್ನು ನಿಪಿ.30 ರಂತೆ ದಾಖಲಿಸಿದ್ದಾಗಿ, ಆರೋಪಿಯಾದ ನಿನ್ನ ಸ್ವಇಚ್ಚಾ ಹೇಳಿಕೆಯಲ್ಲಿ ತನ್ನೊಂದಿಗೆ ಬಂದರೆ ಕೃತ್ಯ ವೆಸಗಿದ ಸ್ಥಳ ಮತ್ತು ಕೃತ್ಯಕ್ಕೆ ಬಳಸಿದ್ದ ಕೋಲನ್ನು ತೋರಿಸುತ್ತೇನೆ ಎಂದು ತಿಳಿಸಿದ್ದೀಯ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-64 ಫ್ರಾಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿ.17.11.2022 ರಂದು ಆರೋಪಿಯಾದ ನಿನ್ನ ಸ್ವಇಚ್ಛಾ ಹೇಳಿಕೆಯ ಮೇರೆಗೆ ಪಂಚನಾಮೆಯನ್ನು ಕೈಗೊಳ್ಳಲು ಫ್ರಾಸಾ.2 ಮತ್ತು ಚಾಸಾ.3 ರವರಿಗೆ ನಿಪಿ.9 ರಂತೆ ನೋಟೀಸನ್ನು ಜಾರಿ ಮಾಡಿ ಠಾಣೆಗೆ ಬರಮಾಡಿಕೊಂಡಿದ್ದಾಗಿ, ಪಂಚರಿಗೆ ಆರೋಪಿಯಾದ ನಿನ್ನನ್ನು ಪರಿಚಯಿಸಿ ಪ್ರಕರಣದ ಸಾರಾಂಶವನ್ನು ತಿಳಿಸಿ ಪಂಚನಾಮೆಗೆ ಸಹಕರಿಸುವಂತೆ ಕೇಳಿಕೊಂಡ ಮೇರೆಗೆ ಅವರು ಅದಕ್ಕೆ ಒಪ್ಪಿದ್ದಾಗಿ, ನಂತರ ಆರೋಪಿಯಾದ ನಿನ್ನನ್ನು ಮತ್ತು ಪಂಚರನ್ನು ಇಲಾಖಾ ಜೀಪಿನಲ್ಲಿ ಕರೆದುಕೊಂಡು ಹೊರಟಿದ್ದಾಗಿ, ಆರೋಪಿಯಾದ ನೀನು ತನ್ನನ್ನು ಮತ್ತು ಪಂಚರನ್ನು ಹೊನ್ನಗುಂಡಿಯಲ್ಲಿ ನೀನು, ಫ್ರಾಸಾ.3 ಮತ್ತು ಮೃತಳು ವಾಸವಿದ್ದ ಮನೆಗೆ ಕರೆದುಕೊಂಡು ಹೋಗಿ ದಿ.15.11.2022 ರಂದು ರಾತ್ರಿ ನಿನ್ನ ಹೆಂಡತಿಗೆ ಕೋಲಿನಿಂದ ಹೊಡೆದು ನಂತರ ಕತ್ತು ಹಿಸುಕಿ, ಬಾಯಿಯನ್ನು ಮುಚ್ಚಿ ಉಸಿರುಗಟ್ಟಿಸಿ ಆಕೆಯನ್ನು ಕೊಲೆ ಮಾಡಿದ ಸ್ಥಳ ಅದೇ ಎಂದು ತಿಳಿಸಿ ತೋರಿಸಿದ್ದೀಯ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-65 ಫ್ರಾಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನಂತರ ಆರೋಪಿಯಾದ ನೀನು ನಿನ್ನ ಹೆಂಡತಿಗೆ ಹೊಡೆದ ಕೋಲನ್ನು ತೋರಿಸುವುದಾಗಿ ಹೇಳಿ ತಮ್ಮನ್ನು ನಿನ್ನ ಮನೆಯ ಹಿಂಭಾಗದಲ್ಲಿದ್ದ ಕೊಟ್ಟಿಗೆಗೆ ಕರೆದುಕೊಂಡು ಹೋಗಿ ಅಲ್ಲಿ ಕಟ್ಟಿ ಹಾಕಲಾಗಿದ್ದ ಒಂದು ನಾಯಿಯ ಪಕ್ಕದಲ್ಲಿದ್ದ ಮು.ಮಾ.1 ಕೋಲನ್ನು ತೆಗೆದು ಹಾಜರುಪಡಿಸಿ ಅದೇ ಕೋಲಿನಿಂದ ನೀನು ನಿನ್ನ ಹೆಂಡತಿಗೆ ಹೊಡೆದು ನಂತರ ಅದನ್ನು ಅಲ್ಲಿ ಇಟ್ಟಿದ್ದಾಗಿ ತಿಳಿಸಿದ್ದೀಯ ಎಂದು, ಸದರಿ ಕೋಲು ಒಂದು ನೆಕ್ಕಿಗಿಡದ ಕೋಲಾಗಿದ್ದು ಸುಮಾರು 38 ಇಂಚು ಉದ್ದ ಇರುವುದು ಕಂಡು ಬಂದಿದ್ದಾಗಿ, ಮು.ಮಾ.1 ಕೋಲನ್ನು ಪಂಚರ ಸಮಕ್ಷಮ ಬಿಳಿಯ ಬಟ್ಟೆಯಿಂದ ಪ್ಯಾಕ್ ಮಾಡಿ P ಎಂಬ ಅಕ್ಷರದಿಂದ ಸೀಲು ಮಾಡಿ ಅಮಾನತ್ತುಪಡಿಸಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-66 ಪ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನಂತರ ಆರೋಪಿಯಾದ ನೀನು ನಿನ್ನ ಮನೆಯ ಮೊದಲನೇ ಕೊಠಡಿಯಲ್ಲಿದ್ದ ಮರದ ಟೇಬಲಿನ ಕೆಳಗೆ ಯಾರಿಗೂ ಕಾಣದಂತೆ ಇಟ್ಟಿದ್ದ ಮು.ಮಾ.8 ಬಟ್ಟೆಯನ್ನು ತೆಗೆದು ಹಾಜರುಪಡಿಸಿ ನೀನು ಮುಖಕ್ಕೆ ಹೊಡೆದು ಆಕೆಯ ಮೂಗಿಗೆ ಕೈಯಿಂದ ಗುದ್ದಿದಾಗ ರಕ್ತ ಬಂದಿದ್ದಾಗಿ, ಆಗ ನೀನು ಮು.ಮಾ.8 ಬಟ್ಟೆಯಿಂದ ರಕ್ತವನ್ನು ಒರೆಸಿದ್ದಾಗಿ ತಿಳಿಸಿದ್ದೀಯ ಎಂದು, ಮು.ಮಾ.8 ಬಟ್ಟೆಯನ್ನು ಪಂಚರ ಸಮಕ್ಷಮ ಬಿಳಿಯ ಬಟ್ಟೆಯಿಂದ ಪ್ಯಾಕ್ ಮಾಡಿ P ಎಂಬ ಅಕ್ಷರದಿಂದ ಸೀಲು ಮಾಡಿ ಅಮಾನತ್ತುಪಡಿಸಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-67 ಪ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನಂತರ ಆರೋಪಿಯಾದ ನೀನು ಸದರಿ ಕೊಠಡಿಯಲ್ಲಿ ಹಗ್ಗದ ಮೇಲೆ ಹಾಕಿದ್ದ ಬಟ್ಟೆಗಳ ಪೈಕಿ ಒಂದು ಜೀನ್ಸ್ ಪ್ಯಾಂಟ್ ಮತ್ತು ಶರ್ಟನ್ನು ತೆಗೆದು ಹಾಜರುಪಡಿಸಿ ಅವುಗಳನ್ನು ನೀನು ಕೃತ್ಯವೆಸಗಿದ ಸಮಯದಲ್ಲಿ ಧರಿಸಿದ್ದಾಗಿ ತಿಳಿಸಿದ್ದೀಯ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-68 ಪ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಮು.ಮಾ.3 ಪ್ಯಾಂಟ್ ಮತ್ತು ಮು.ಮ.4 ಶರ್ಟನ್ನು ಪಂಚರ ಸಮಕ್ಷಮ ಬಿಳಿಯ ಬಟ್ಟೆಯಿಂದ ಪ್ರತ್ಯೇಕವಾಗಿ ಪ್ಯಾಕ್ ಮಾಡಿ P ಎಂಬ ಅಕ್ಷರದಿಂದ ಸೀಲು ಮಾಡಿ ಅಮಾನತ್ತುಪಡಿಸಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-69 ಪ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನಂತರ ಆರೋಪಿಯಾದ ನೀನು ಅದೇ ರೂಮಿನಲ್ಲಿ ಸ್ಥಳವನ್ನು ತೋರಿಸಿ ಅಲ್ಲಿ ನೆಲದ ಮೇಲೆ ಚಾಪೆಯನ್ನು ಹಾಸಿ ನಿನ್ನ ಹೆಂಡತಿ ಮಗನೊಂದಿಗೆ ಮಲಗಿದ್ದ ಸಮಯದಲ್ಲಿ ನೀನು ಆಕೆಯ ಮೂಗು ಮತ್ತು ಬಾಯಿಯನ್ನು ಮುಚ್ಚಿ, ಕುತ್ತಿಗೆಯನ್ನು ಹಿಸುಕಿ,

ಉಸಿರುಕಟ್ಟಿಸಿ ಕೊಲೆ ಮಾಡಿದ ಸ್ಥಳ ಅದೇ ಎಂದು ತಿಳಿಸಿದ್ದಾಗಿ, ನಂತರ ಆರೋಪಿಯಾದ ನೀನು ಮರದ ಟೇಬಲ್ ಮೇಲಿದ್ದ ಬೆಡ್ ಶೀಟನ್ನುತೋರಿಸಿ ನಿನ್ನ ಹೆಂಡತಿ ಮಲಗಿದ್ದ ಬೆಡ್ ಶೀಟ್ ಅದೇ ಎಂದು ಹಾಜರುಪಡಿಸಿ ಅದಕ್ಕೆ ರಕ್ತದ ಕಲೆಯಾಗಿದ್ದರಿಂದ ಅದನ್ನು ಮಡಚಿ ಟೇಬಲ್ ಮೇಲೆ ಇಟ್ಟಿದ್ದಾಗಿ ತಿಳಿಸಿದ್ದೀಯ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-70 ಪ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಮು.ಮಾ.2 ರಕ್ತದ ಕಲೆಯಾಗಿದ್ದ ಬೆಡ್ ಶೀಟಿನ ಭಾಗವನ್ನು ಪಂಚರ ಸಮಕ್ಷಮ ಬಿಳಿಯ ಬಟ್ಟೆಯಿಂದ ಪ್ಯಾಕ್ ಮಾಡಿ P ಎಂಬ ಅಕ್ಷರದಿಂದ ಸೀಲು ಮಾಡಿ ಅಮಾನತ್ತುಪಡಿಸಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-71 ಪ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಚಾಪೆಯ ಮೇಲೆ ಮು.ಮಾ.5 ರಿಂದ ಮೂ.ಮ.7 ರಗ್ಗುಗಳು ಇರುವುದು ಕಂಡು ಬಂದಿದ್ದಾಗಿ, ಮುಂದಿನ ತನಿಖೆಗಾಗಿ ಸದರಿ ರಗ್ಗುಗಳ ಒಂದೊಂದು ಭಾಗವನ್ನು ಕತ್ತರಿಸಿ ಪಂಚರ ಸಮಕ್ಷಮ ಬಿಳಿಯ ಬಟ್ಟೆಯಿಂದ ಪ್ರತ್ಯೇಕವಾಗಿ ಪ್ಯಾಕ್ ಮಾಡಿ P ಎಂಬ ಅಕ್ಷರದಿಂದ ಸೀಲು ಮಾಡಿ ಅಮಾನತ್ತುಪಡಿಸಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-72 ಪ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಆ ಬಗ್ಗೆ ಸ್ಥಳದಲ್ಲಿ ಮೇಲೆ ಹೇಳಿದ ಪಂಚರ ಸಮಕ್ಷಮ ಬೆಳಿಗ್ಗೆ 10.00 ರಿಂದ 11.30 ಗಂಟೆಯವರೆಗೆ ನಿಪ.10 ರಂತೆ ಪಂಚನಾಮೆಯನ್ನು ಜರುರಿಸಿದ್ದಾಗಿ, ಪಂಚಾನಾಮೆಯ ಕಾಲಕ್ಕೆ ನಿಪಿ.11 ರಿಂದ ನಿಪಿ.20 ರಂತೆ ಪೋಟೋಗಳನ್ನು ತೆಗೆಸಿದ್ದಾಗಿ, ನಿಪಿ.10 ಪಂಚನಾಮೆಯ ಕಾಲಕ್ಕೆ ವಶಪಡಿಸಿಕೊಂಡ ವಸ್ತುಗಳನ್ನು ನಿಪಿ.31 ಠಾಣಾ ಮಾಲುಪಟ್ಟಿ ಸಂಖ್ಯೆ 68/2022 ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-73 ಪ್ರಾಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕ 17.11.2022 ರಂದು ಪ್ರಾಸಾ.1 ರವರ ಮುಂದುವರೆದ ಹೇಳಿಕೆಯನ್ನು ಮತ್ತು ಸಾಕ್ಷಿದಾರರಾದ ಚಾಸಾ.14, ಚಾಸಾ.15,ಚಾಸಾ.16 ಮತ್ತು ಪ್ರಾಸಾ.3 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದಾಗಿ, ಪ್ರಾಸಾ.3 ರವರು ನಿಪಿ.21 ರಂತೆ ಹೇಳಿಕೆಯನ್ನು ನೀಡಿದ್ದಾಗಿ, ದಿನಾಂಕ 18.11.2022 ರಂದು ಚಾಸಾ.21 ರವರಿಗೆ ಆರೋಪಿಯಾದ ನಿನ್ನ ವಾಸದ ಮನೆಯ ದಾಖಲೆಯನ್ನು ನೀಡುವಂತೆ ನಿಪಿ.32 ರಂತೆ ಕೋರಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-74 ಪ್ರಾಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಅದೇ ದಿನ ಪ್ರಾಸಾ.5 ರವರಿಗೆ ಕೃತ್ಯ ನಡೆದ ಮನೆಯ ವಿದ್ಯುತ್ ಬಳಕೆದಾರರ ಬಗ್ಗೆ ಮಾಹಿತಿ ನೀಡಲು ಕೋರಿ ನಿಪಿ.23 ರಂತೆ ಮನವಿಯನ್ನು ಸಲ್ಲಿಸಿದ್ದಾಗಿ, ಅದೇ ದಿನ ಕೊಪ್ಪ ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಮನವಿಯನ್ನು ಸಲ್ಲಿಸಿ ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಿಕೊಡುವಂತೆ ಕೋರಿದ್ದಾಗಿ, ಅದೇ ದಿನ ಚಾಸಾ.17 ಮತ್ತು ಚಾಸಾ.18 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-75 ಪ್ರಾಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕ 29.11.2022 ರಂದು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ವೈದ್ಯಾಧಿಕಾರಿಗಳಾದ ಚಾಸಾ.31 ರವರಿಂದ ನಿಪಿ.38 ರಂತೆ ಮೃತಳ ಮರಣೋತ್ತರ ಪರೀಕ್ಷಾ ವರದಿ ಮತ್ತು ಸದರಿಯವರು ಮರಣೋತ್ತರ ಪರೀಕ್ಷಾ ಸಮಯದಲ್ಲಿ ಸಂಗ್ರಹಿಸಿದ್ದ ಮೃತಳ ಬಟ್ಟೆಗಳು, viscera ಮತ್ತು ಮಾದರಿಗಳನ್ನು ಸೀಲಾದ ಸ್ಥಿತಿಯಲ್ಲಿ ಚಾಸಾ.24 ರವರು ತಂದು ಹಾಜರುಪಡಿಸಿದ ಮೇರೆಗೆ ಚಾಸಾ.6 ಮತ್ತು ಚಾಸಾ.7 ರವರಿಗೆ ನಿಪಿ.33 ನೋಟೀಸನ್ನು ಜಾರಿ ಮಾಡಿ ಬರಮಾಡಿಕೊಂಡು ಅವರ ಸಮಕ್ಷಮ ನಿಪಿ.34 ರಂತೆ ಪಂಚನಾಮೆಯನ್ನು ಜರುಗಿಸಿದ್ದಾಗಿ, ಸದರಿ ಬಟ್ಟೆ ಮತ್ತು ವಸ್ತುಗಳನ್ನು ಅಮಾನತುಪಡಿಸಿಕೊಂಡಿದ್ದಾಗಿ ಅವುಗಳನ್ನು ನಿಪಿ.35 ಠಾಣಾ ಮಾಲುಪಟ್ಟಿ ಸಂಖ್ಯೆಃ70/2022 ರಲ್ಲಿ

ಅಳವಡಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-76 ಪ್ರಾಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಸದರಿ ಪಂಚನಾಮೆಯ ಕಾಲಕ್ಕೆ ನಿಪಿ.36 ಮತ್ತು ನಿಪಿ.37 ಫೋಟೋಗಳನ್ನು ತೆಗೆಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-77 ಪ್ರಾಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಪ್ರಕರಣದಲ್ಲಿ ಅಮಾನತುಪಡಿಸಿಕೊಂಡಿದ್ದ ನಿಪಿ.31 ಮತ್ತು ನಿಪಿ.35 ಮಾಲುಪಟ್ಟಿಗಳಲ್ಲಿ ಅಳವಡಿಸಿಕೊಂಡಿದ್ದ ಮುದ್ದೆ ಮಾಲುಗಳನ್ನು ಪರೀಕ್ಷೆಗಾಗಿ ಮಂಗಳೂರಿನ ಆರ್.ಎಫ್.ಎಸ್.ಎಲ್ ಗೆ ಮತ್ತು ಬೆಂಗಳೂರಿನ ಎಸ್.ಎಫ್.ಎಸ್.ಎಲ್ ಗೆ ದಿನಾಂಕ 30.11.2022 ರಂದು ಸಿಬ್ಬಂದಿಗಳಾದ ಚಾಸಾ.25 ಮತ್ತು ಚಾಸಾ.26 ರವರ ಮೂಲಕ ಕಳುಹಿಸಿಕೊಟ್ಟು ಸ್ವೀಕೃತಿಗಳನ್ನು ಪಡೆದುಕೊಂಡಿದ್ದಾಗಿ ಮತ್ತು ಸದರಿ ಸಿಬ್ಬಂದಿಗಳ ಹೇಳಿಕೆಗಳನ್ನು ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-78 ಪ್ರಾಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕ 02.12.2022 ರಂದು ಚಾಸಾ.20 ರವರ ಹೇಳಿಕೆಯನ್ನು ಪಡೆದುಕೊಂಡಿದ್ದಾಗಿ ಹಾಗೂ ಆರೋಪಿಯಾದ ನಿನ್ನ ಮತ್ತು ಮೃತ ಯಶೋಧಾ ಸದರಿಯವರ ಎಸ್ಟೇಟಿನಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ದಿನಾಂಕ 15.11.2022 ರಿಂದ ಕೆಲಸಕ್ಕೆ ಗೈರು ಹಾಜರಾದ ಬಗ್ಗೆ ಹಾಜರಾತಿ ಪುಸ್ತಕದ ದೃಢೀಕೃತ ಪ್ರತಿಯನ್ನು ನಿಪಿ.39 ರಂತೆ ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-79 ಪ್ರಾಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕ 07.12.2022 ರಂದು ಮಂಗಳೂರು ಆರ್.ಎಫ್.ಎಸ್.ಎಲ್

ನಿಂದ ಎರಡು ಪರೀಕ್ಷಾ ವರದಿಗಳನ್ನು ನಿಪಿ.27 ಮತ್ತು ನಿಪಿ.40 ರಂತೆ ಎಫ್.ಎಲ್.ಎಂ.ಎಸ್ ತಂತ್ರಾಂಶದ ಮೂಲಕ ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-80 ಫ್ರಾಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕ 09.12.2022 ರಂದು ಬೆಂಗಳೂರಿನ ಎಸ್.ಎಫ್.ಎಸ್.ಎಲ್ ನಿಂದ ಪರೀಕ್ಷಾ ವರದಿಯನ್ನು ನಿಪಿ.28 ರಂತೆ ಎಫ್.ಎಲ್.ಎಂ.ಎಸ್ ತಂತ್ರಾಂಶದ ಮೂಲಕ ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-81 ಫ್ರಾಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕ 12.01.2023 ರಂದು ಚಾಸಾ.31 ರವರಿಗೆ ಮೇಲೆ ಹೇಳಿದಂತೆ ದಿನಾಂಕ 07.12.2022 ಮತ್ತು 09.12.2022 ರಂದು ಎಫ್.ಎಸ್.ಎಲ್. ನಿಂದ ಪಡೆದುಕೊಂಡಿದ್ದ ವರದಿಗಳು ಮತ್ತು ಕೃತ್ಯಕ್ಕೆ ಬಳಸಲಾಗಿದ್ದ ಒಂದು ಮರದ ಕೋಲನ್ನು ಮನವಿಯೊಂದಿಗೆ ಸಲ್ಲಿಸಿಕೊಂಡು ಅವುಗಳನ್ನು ಪರೀಕ್ಷಿಸಿ ಮೃತಳ ಸಾವಿನ ಬಗ್ಗೆ ಅಂತಿಮ ಅಭಿಪ್ರಾಯವನ್ನು ತಿಳಿಸಲು ಮತ್ತು ಸದರಿ ಕೋಲಿನಿಂದ ಹಲ್ಲೆ ಮಾಡಿದರೆ ಮರಣೋತ್ತರ ಪರೀಕ್ಷಾ ವರದಿಯಲ್ಲಿ ನಮೂದಿಸಿರುವ ಗಾಯಗಳಾಗುವ ಸಾಧ್ಯತೆಯ ಬಗ್ಗೆ ತಿಳಿಸುವಂತೆ ನಿಪಿ.41 ರಂತೆ ಕೋರಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-82 ಫ್ರಾಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕ 16.01.2023 ರಂದು ಚಾಸಾ.21 ರವರಿಂದ ಕೃತ್ಯ ನಡೆದ ಆರೋಪಿಯಾದ ನಿನ್ನ ಮನೆಯ ಬಗ್ಗೆ ದೃಢೀಕರಣ ಪತ್ರವನ್ನು ಪಡೆದುಕೊಂಡಿದ್ದಾಗಿ, ಅದರ ಪ್ರಕಾರ ಆರೋಪಿಯಾದ ನೀನು ಹೊನ್ನಗುಂಡಿಯಲ್ಲಿ ವಾಸವಿದ್ದ ಮನೆ ಗೋಪಾಲ ಬಿನ್ ಕುಪ್ಪ ಪೂಜಾರಿರವರ ಹೆಸರಿನಲ್ಲಿ ದಾಖಲಾಗಿರುವುದಾಗಿ ಮತ್ತು ಆರೋಪಿಯಾದ ನೀನು ಸದಾನಂದ ರವರ ಹೆಸರಿನಲ್ಲಿ ಖಾತೆ

ಇರುವುದಿಲ್ಲವೆಂದು ನಿಪಿ.42 ರಂತೆ ವರದಿಯನ್ನು ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-83 ಪ್ರಾಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕ 28.01.2023 ರಂದು ಚಾಸಾ.33 ರವರ ಹೇಳಿಕೆಯನ್ನು ಪಡೆದುಕೊಂಡಿದ್ದಾಗಿ, ದಿನಾಂಕ 31.01.2023 ರಂದು ಚಾಸಾ.31 ರವರಿಂದ ಮೃತಳ ಸಾವಿನ ಬಗ್ಗೆ ಅಂತಿಮ ಅಭಿಪ್ರಾಯವನ್ನು ನಿಪಿ.43 ರಂತೆ ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-84 ಪ್ರಾಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕ 01.02.2023 ರಂದು ಸಾಕ್ಷಿದಾರರಾದ ಚಾಸಾ.8, ಪ್ರಾಸಾ.4, ಚಾಸಾ.10, ಚಾಸಾ.11, ಚಾಸಾ.12 ರವರ ಮುಂದುವರೆದ ಹೇಳಿಕೆಗಳನ್ನು ಪಡೆದುಕೊಂಡಿದ್ದಾಗಿ, ದಿನಾಂಕ 11.02.2023 ರಂದು ಚಾಸಾ.23 ರವರಿಂದ ಪ್ರಾಸಾ.3 ರವರ ವ್ಯಾಸಂಗ ದೃಢೀಕರಣ ಪತ್ರವನ್ನು ನಿಪಿ.44 ರಂತೆ ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-85 ಪ್ರಾಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕ 10.02.2023 ರಂದು ಪ್ರಾಸಾ.5 ರವರಿಗೆ ನಿಪಿ.25 ರಂತೆ ಮನವಿಯನ್ನು ಸಲ್ಲಿಸಿ ದಿನಾಂಕ 15.11.2022 ರಂದು ರಾತ್ರಿ 7.00 ಗಂಟೆಯಿಂದ ಬೆಳಿಗ್ಗೆ 6.00 ಗಂಟೆಯವರೆಗೆ ಹೊನ್ನಗುಂಡಿಯಲ್ಲಿರುವ ಆರೋಪಿಯಾದ ನಿನ್ನ ಮನೆಗೆ ವಿದ್ಯುತ್ ಸರಬರಾಜು ಆಗುತ್ತಿತ್ತೇ ಎಂದು ಮಾಹಿತಿಯನ್ನು ನೀಡಲು ಕೋರಿದ್ದಾಗಿ, ಅದರಂತೆ ಪ್ರಾಸಾ.5 ರವರು ದಿನಾಂಕ 11.02.2023 ರಂದು ಮೇಲೆ ಹೇಳಲಾದ ಅವಧಿಯಲ್ಲಿ ವಿದ್ಯುತ್ ಸಂಪರ್ಕವಿತ್ತು ಎಂದು ತಿಳಿಸಿ ನಿಪಿ.26 ರಂತೆ ವರದಿಯನ್ನು ಸಲ್ಲಿಸಿದ್ದಾಗಿ ಮತ್ತು ದಿನಾಂಕ 04.11.2022 ರ ವಿದ್ಯುತ್ ನಿಪಿ.45 ರಂತೆ ಬಿಲ್ಲನ್ನು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-86 ಪ್ರಾಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕ 13.02.2023 ರಂದು ಪ್ರಾಸಾ.3 ರವರನ್ನು ಕೊಪ್ಪ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರ ಬಳಿ ಹಾಜರುಪಡಿಸಿ ಅವರಿಂದ ನಿಪಿ.22 ರಂತೆ ನಿನ್ನ ಹೇಳಿಕೆಯನ್ನು ಸಿ.ಆರ್.ಪಿ.ಸಿ. ಕಲಂ 164 ರಡಿಯಲ್ಲಿ ದಾಖಲು ಮಾಡಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-87 ಪ್ರಾಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ತನಿಖಾ ಕಾಲದಲ್ಲಿ ಚಾಸಾ.36 ರವರು ತನ್ನ ಸೂಚನೆಯ ಮೇರೆಗೆ ತನ್ನ ಮೊಬೈಲ್ ನಿಂದ ಫೋಟೋಗಳನ್ನು ತೆಗೆದಿದ್ದು ಮತ್ತು ತಮ್ಮ ಮೊಬೈಲ್ ನಿಂದ ಪ್ರಾಸಾ.3 ರವರ ಹೇಳಿಕೆಯನ್ನು ದಾಖಲು ಮಾಡಿಕೊಳ್ಳುವ ಸಮಯದಲ್ಲಿ ವೀಡಿಯೋ ಮಾಡಿದ್ದಾಗಿ, ನಂತರ ಅವುಗಳನ್ನು ತನ್ನ ಸೂಚನೆಯ ಮೇರೆಗೆ ದಿನಾಂಕ 13.02.2023 ರಂದು ಎರಡು ಪ್ರತ್ಯೇಕ ನಿಪಿ.46 ಮತ್ತು ನಿಪಿ.47 ಸಿಡಿಗಳಿಗೆ ಯಥಾಸ್ಥಿತಿಯಲ್ಲಿ ವರ್ಗಾಯಿಸಿಕೊಟ್ಟಿದ್ದಾಗಿ ಆ ಬಗ್ಗೆ ನಿಪಿ.48 ರಂತೆ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65 ಬಿ ರಡಿಯಲ್ಲಿ ದೃಢೀಕರಣ ಪತ್ರವನ್ನು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-88 ಪ್ರಾಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಅಲ್ಲಿಯವರೆಗೆ ಆಗಿದ್ದ ತನಿಖೆಯಲ್ಲಿ ಆರೋಪಿಯಾದ ನಿನ್ನ ವಿರುದ್ದ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡು ಬಂದಿದ್ದರಿಂದ ಬೆಂಗಳೂರು ಎಸ್.ಎಫ್.ಎಸ್.ಎಲ್ ನಿಂದ ಮೃತಳ ಉಗುರಿನ ತುಣುಕುಗಳ ಪರೀಕ್ಷಾ ವರದಿ, ಕೃತ್ಯಕ್ಕೆ ಬಳಸಲಾದ ಕೋಲಿನ ಬಗ್ಗೆ ವೈದ್ಯರ ವರದಿಯನ್ನು, ಕೃತ್ಯ ನಡೆದ ಸ್ಥಳದ ನಕ್ಷೆಯನ್ನು, ಮೊಬೈಲ್ ನಂಬರ್ ಗಳ ಸಿಡಿಆರ್, ಸಿ ಎ ಎಫ್ ದಾಖಲೆಗಳನ್ನು ಪಡೆಯುವುದನ್ನು ಬಾಕಿ ಇರಿಸಿ ದಿನಾಂಕ 14.02.2023 ರಂದು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-89 ಪ್ರಾಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕ 29.03.2023 ರಂದು ಬೆಂಗಳೂರಿನ ಎಸ್.ಎಫ್.ಎಸ್. ಎಲ್

ನಿಂದ ಪರೀಕ್ಷಾ ವರದಿಯನ್ನು ನಿಪಿ.49 ರಂತೆ ಎಫ್.ಎಲ್.ಎಂ.ಎಸ್ ತಂತ್ರಾಂಶದ ಮೂಲಕ ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-90 ಪ್ರಾಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಮೇಲೆ ಹೇಳಿದಂತೆ ತಾನು ಎಫ್.ಎಸ್.ಎಲ್ ವರದಿಗಳನ್ನು ಎಫ್.ಎಲ್.ಎಂ.ಎಸ್ ತಂತ್ರಾಂಶದ ಮೂಲಕ ಡೌನ್ ಲೋಡ್ ಮಾಡಿಕೊಂಡು ಹಾಜರುಪಡಿಸಿದ್ದ ಬಗ್ಗೆ ದಿನಾಂಕ 20.02.2024 ರಂದು ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65 ಬಿ ರಡಿಯಲ್ಲಿ ನಿಪಿ.50 ರಂತೆ ದೃಢೀಕರಣ ಪತ್ರವನ್ನು ತಯಾರಿಸಿ ಕಡತಕ್ಕೆ ಅಳವಡಿಸಿಕೊಂಡಿದ್ದಾಗಿ, ನಂತರ ದಿನಾಂಕ 21.02.2024 ರಂದು ನಿಪಿ.49 ಮತ್ತು ನಿಪಿ.50 ದಾಖಲೆಗಳನ್ನು ನ್ಯಾಯಾಲಯಕ್ಕೆ ಮನವಿಯೊಂದಿಗೆ ಸಲ್ಲಿಸಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-91 ಪ್ರಾಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕ 25.04.2023 ರಂದು ಚಾಸಾ.31 ರವರಿಂದ ಕೃತ್ಯಕ್ಕೆ ಬಳಸಲಾದ ಕೋಲನ್ನು ಪರೀಕ್ಷಿಸಿ ನೀಡಿದ ವರದಿಯನ್ನು ನಿಪಿ.51 ರಂತೆ ಪಡೆದುಕೊಂಡು ಅದನ್ನು ದಿನಾಂಕ 05.07.2023 ರಂದು ನ್ಯಾಯಾಲಯಕ್ಕೆ ಮನವಿಯೊಂದಿಗೆ ಸಲ್ಲಿಸಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-92 ಪ್ರಾಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕ 30.11.2022 ರಂದು ಪ್ರಾಸಾ.5 ರವರಿಂದ ಕೃತ್ಯ ನಡೆದ ಮನೆಗೆ ಆರೋಪಿಯಾದ ನಿನ್ನ ತಾಯಿಯಾದ ಜಾನಕಿ ಕೋಂ ಗುರುವ, ಸೋಮೇಶ್ವರ ಖಾನ್ ಎಸ್ಟೇಟ್ ರವರ ಹೆಸರಿನಲ್ಲಿ ಮೆಸ್ಕಾಂ ಇಲಾಖೆಯಿಂದ ಮೀಟರ್ ಬೋರ್ಡನ್ನು ಅಳವಡಿಸಿದ್ದಾಗಿ ವರದಿಯನ್ನು ನಿಪಿ.24 ರಂತೆ ಪಡೆದುಕೊಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-93 ಪ್ರಾಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಚಾಸಾ.19 ಗೋಪಾಲ್ ರವರು ತಮ್ಮ ಹೇಳಿಕೆಯಲ್ಲಿ ಆರೋಪಿಯಾದ ನೀನು ಹೊನ್ನಗುಂಡಿ ಗ್ರಾಮದಲ್ಲಿ ವಾಸವಿದ್ದ ಮನೆಯನ್ನು ನಿನ್ನ ತಂದೆ ಗುರುವರವರಿಗೆ ಸುಮಾರು 20 ವರ್ಷಗಳ ಹಿಂದೆ ಮಾರಾಟ ಮಾಡಿದ್ದಾಗಿ ಆದರೆ ಅದರ ಮೇರೆಗೆ ಗುರುವರವರ ಹೆಸರಿಗೆ ಖಾತೆ ಬದಲಾವಣೆಯಾಗದಿದ್ದ ಬಗ್ಗೆ ಮತ್ತು ಆ ಸಮಯದಲ್ಲಿ ವಿದ್ಯುತ್ ಸಂಪರ್ಕವನ್ನು ಪಡೆದುಕೊಂಡಿಲ್ಲವೆಂದು ನಂತರದಲ್ಲಿ ಆರೋಪಿಯಾದ ನಿನ್ನ ತಾಯಿಯ ಹೆಸರಿನಲ್ಲಿ ಸದರಿ ಮನೆಗೆ ವಿದ್ಯುತ್ ಸಂಪರ್ಕವನ್ನು ಪಡೆದುಕೊಂಡಿರುವುದಾಗಿ ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

Q-94 PW.10 Dr. Lohithkumar, Associate Professor, Department of Forensic Medicine and Toxicology, Chikkamagaluru, deposed that on 16.11.2022 at 8.00 p.m., he received requisition from Circle Inspector of Police, Koppa Circle to conduct postmortem examination on deceased by name Yashoda W/o Sadananda, female, aged about 45 years, resident of Honnagundi Village, Koppa Taluk along with said dead body and it was identified by CW33 WHC 100 Kalavathi. What do you say?

Ans: False

Q-95 PW.10, further deposed that he conducted postmortem examination of said dead body from 8.05 p.m to 9.00 p.m on the same day. On examination, he noticed that the dead body was of brownish complexioned, moderately built and nourished, measuring 162 c.m in length and the rigormortis was in passing off stage. Livor mortis was present over the back

except over pressure areas. No evidence of decomposition was present. He noticed the presence of subconjunctival hemorrhage in left eye. Clotted blood was present in and around both nasal cavity and inner canthus of left eye. Cyanosis was present in nail beds of all fingers. What do you say?

Ans: False

Q-96 PW.10, further deposed that he noticed the bluish discoloration was present around left eye(Black eye), reddish contusion measuring 0.8 c.m x0.7 c.m was present over bridge of nose. Swelling , deformity and bony crepitation with fracture of underlying nasal bones present, reddish contused abrasion measuring 1.3 cm x 0.3 cm was present obliquely over glabella and base of nose, reddish contusion measuring 16 cm x5cm was present over left side of neck along the clavicle and over sterna notch. What do you say?

Ans: False

Q-97 PW.10, further deposed that bluish contusion measuring 5 cm x 5 cm was present over front of upper part of right chest, reddish contusion measuring 2 cmx0.5 cm was present horizontally over thyroid eminence, bluish patterned semi circular contusion with central pale area(Bite mark) measuring 6 cmx5 cm was present over inner aspect of right knee joint, reddish abrasion measuring 0.5 cm x 0.4 cm was present over front of left knee joint, bluish patterned semi circular contusion with central pale are (Bite mark) measuring 5 cm x 4.5 cm was present over posterior-medial

aspect of mid part of left arm. What do you say?

Ans: False

Q-98 PW.10, further deposed that reddish contusion measuring 2 cm x 2 cm was present over outer aspect of right elbow joint, bluish contusion measuring 2.5 cmx2 cm was present over outer aspect of mid part of right arm, bluish contusion measuring 10 cm x 4 cm was present over left side of upper back over scapular region, reddish abraded contusion measuring 4c m x 3 cm was present over outer aspect of left buttock, V-shaped linear abrasions(nail marks) 2 in numbers, measuring 2.7 cm x 01 cm are present over flexor aspect of lower end of right forearm. What do you say?

Ans: False

Q-99 PW.10, further deposed that reddish abrasion measuring 1.5 cm x 0.5 cm was present over back of left elbow joint, reddish contusions(teeth mark impressions) measuring 2cm x 1 cm and 1.5 cm x 1 cm are present over inner aspect of lower lip and inner aspect of upper lip respectively, reddish cresentric abrasion measuring 0.5 cm x 0.3 cm was present over right side of upper lip external injuries. What do you say?

Ans: False

Q-100 PW.10, further deposed that on internal examination on dissection, he noticed the presence of sub-scalp extravasation of blood in both frontal region of scalp. Patchy sub-

arachnoid hemorrhage was present over frontal and basi-occipital lobes of cerebrum. On dissection of thorax he noticed that walls were contused at places, larynx and trachea showed congested and contained copious froth mixed mucus. Both lungs were congested, heavy and edematous. Petechial hemorrhage were present over inter-lobar fissures on both sides. Cut section showed dark blood mixed intense froth was oozing out. The surface of the heart showed petechial hemorrhages. What do you say?

Ans: False

Q-101 PW.10, further deposed that on dissection of abdomen, mouth pharynx and oesophagus showed congestion and contained copious froth mixed mucus. Stomach contained about 100 ml of mucus and its walls were normal. All other organs were congested. On dissection of neck, he noticed that subcutaneous tissues under the skin of neck showed extravasation of blood in front and left side of neck. Muscles were contused with extravasation in surrounding areas. Hyoid bone, thyroid and cricoid cartilages were intact. Jugular vein was torn on left side. The time since death was about 18 to 24 hours at the time of commencement of postmortem examination. What do you say?

Ans: False

Q-102 PW.10, further deposed that he had collected the following specimen and cloths found on the dead body, preserved the same and handed over the same to the investigating officer through WPC Kalavathi in sealed manner and

instructed to submit the samples to forensic science laboratory for analysis at the earliest. What do you say?

Ans: False

Q-103 PW.10, further deposed that a lavender colored gown(nighty), a peech coloured inner gown(Petticoat), a dark blue colored panty are marked as MO.9 to MO.11. What do you say?

Ans: False

Q-104 PW.10, further deposed that impression taken on slide with cello tape from right side of neck, left side of neck, front side of neck and control sample and the same are marked as MO.13 to MO.16. What do you say?

Ans: False

Q-105 PW.10, further deposed that the blood taken on in gauze piece for cross matching and the same is marked as MO.12. What do you say?

Ans: False

Q-106 PW.10, further deposed that after examination he kept his opinion as per Ex.P38 regarding cause of death pending and issued postmortem examination report on the same day i.e., on 16.11.2022. What do you say?

Ans: False

Q-107 PW.10, further deposed that later on 12.01.2023, he received a requisition from the investigating officer along with two FSL reports

dated 07.12.2022 and another FSL report dated 09.12.2022. He had gone through the findings given in said reports and issued his final opinion as per Ex.P43 regarding cause of death on 13.01.2023 with the opinion that death was due to asphyxia as a result of combined effect of smothering and compression of neck which was sufficient to cause death in the ordinary course of nature. All the injuries were ante-mortem in nature and fresh at the time of death. What do you say?

Ans: False

Q-108 PW.10, further deposed that on 08.02.2023, he received a requisition from the investigating officer along with a sealed article for examination and opinion. He opened said article on the same day and found a wooden heavy stick, its length was 96 c.m and circumference was 7 c.m, and its weight was 180 grams. After examination, he repacked said article in the same cover and sealed with sample seal and handed over the same to the investigating officer. On the basis of examination of said article, he was of the opinion as per Ex.P51 that the injuries noted by him on the dead body of deceased as per Ex.P38 report could be possible if assaulted with said wooden heavy stick. What do you say?

Ans: False

Q-109 PW.10, further deposed that he can identify the aforesaid heavy wooden stick as MO.1. The injury No.1 mentioned in Ex.P38 report is possible if a person is fisted on left eye. The

injury No.4 mentioned in Ex.P38 report is possible if the neck is pressed with hands with force during assault. The injury No.7, 9 and 16 mentioned in Ex.P38 report are possible if a person is bitten by another person and the same could not be self inflicted because of the area of the presence of said injuries. Rest of the injuries are possible if assaulted with MO.1 stick. What do you say?

Ans: False

ಪ್ರಶ್ನೆ-110 ಪ್ರಾಸಾ.11 ರಮೇಶ್ ಹೆಚ್.ಪಿ., ಪಿ.ಡಿ.ಒ. ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 18.11.2022 ರಂದು ಕೊಪ್ಪ ವೃತ್ತ ನಿರೀಕ್ಷಕರು ತನಗೆ ಮನವಿಯನ್ನು ಸಲ್ಲಿಸಿ ಜಯಪುರ ಠಾಣಾ ಮೊಕದ್ದಮೆ ಸಂಖ್ಯೆಃ50/2022 ಕ್ಕೆ ಸಂಬಂಧಿಸಿದಂತೆ ಹೊನ್ನಗುಂಡಿ ಗ್ರಾಮದಲ್ಲಿ ಸದಾನಂದ ಬಿನ್ ಲೇಟ್ ಗುರುವ ರವರು ವಾಸವಾಗಿರುವ ಮನೆಯ ಅಸೆಸ್ ಮೆಂಟ್ ಪ್ರತಿಯನ್ನು ನೀಡುವಂತೆ ಕೋರಿದ್ದಾಗಿ, ನಿಪಿ.32 ರಂತೆ ಮನವಿಯನ್ನು ತಾನು ದಿನಾಂಕ 22.11.2022 ರಂದು ಸ್ವೀಕರಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-111 ಪ್ರಾಸಾ.11 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಅದರ ಮೇರೆಗೆ ತಾನು ತಮ್ಮ ಪಂಚಾಯ್ತಿಯ ಕಡತಗಳನ್ನು ಪರಿಶೀಲಿಸಿ ನೋಡಿದಾಗ ಸದಾನಂದ ಬಿನ್ ಲೇಟ್ ಗುರುವ ರವರು ಹೊನ್ನಗುಂಡಿ ಗ್ರಾಮದಲ್ಲಿ ವಾಸವಿದ್ದ ಮನೆಯ ಅಸೆಸ್ ಮೆಂಟ್ ಸಂಖ್ಯೆ 206/240 ಆಗಿದ್ದು ಅದು ಗೋಪಾಲ ಬಿನ್ ಕುಪ್ಪ ಪೂಜಾರಿ ಎಂಬುವವರ ಹೆಸರಿನಲ್ಲಿ ದಾಖಲಾಗಿದ್ದು ಕಂಡು ಬಂದಿದ್ದಾಗಿ, ಸದಾನಂದ ಬಿನ್ ಲೇಟ್ ಗುರುವ ರವರ ಹೆಸರಿನಲ್ಲಿ ಖಾತೆ ಇಲ್ಲದಿರುವುದು ಕಂಡು ಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-112 ಪ್ರಾಸಾ.11 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಆ ಬಗ್ಗೆ ತಾನು ದಿನಾಂಕ 10.01.2023 ರಂದು ಕೊಪ್ಪ ವೃತ್ತ ನಿರೀಕ್ಷಕರಿಗೆ

ದೃಢೀಕರಣ ಪತ್ರವನ್ನು ನೀಡಿದ್ದಾಗಿ, ನಿಪಿ.42 ದೃಢೀಕರಣ ಪತ್ರವನ್ನು ಸಂಬಂಧಿಸಿದ ಪೊಲೀಸರು ದಿನಾಂಕ 16.01.2023 ರಂದು ತನ್ನಿಂದ ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-113 ಪ್ರಾ.ಸಾ.12 ಜಿ. ತಿಪ್ಪೇಶ್, ಹೆಚ್.ಸಿ.150, ವೃತ್ತ ನಿರೀಕ್ಷಕರ ಕಛೇರಿ, ಕೊಪ್ಪ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 16.11.2022, ದಿನಾಂಕ 17.11.2022 ಮತ್ತು ದಿನಾಂಕ 29.11.2022 ರಂದು ಈ ಪ್ರಕರಣದ ತನಿಖಾ ಕಾಲದಲ್ಲಿ ತನಿಖಾಧಿಕಾರಿಗಳಾದ ಪ್ರಾ.ಸಾ.9 ರವರು ಸೂಚಿಸಿದ ಮೇರೆಗೆ ಅವರ ಮೊಬೈಲ್ ನಲ್ಲಿ ಫೋಟೋಗಳನ್ನು ತೆಗೆದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-114 ಪ್ರಾ.ಸಾ.12 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕ 13.02.2023 ರಂದು ಪ್ರಾ.ಸಾ.9 ರವರು ಪ್ರಾ.ಸಾ.3 ರವರ ಹೇಳಿಕೆಯನ್ನು ದಾಖಲು ಮಾಡಿಕೊಂಡಿದ್ದಾಗಿ ಆ ಸಮಯದಲ್ಲಿ ತಾನು ತನಿಖಾಧಿಕಾರಿಗಳಾದ ಪ್ರಾ.ಸಾ.9 ರವರು ಸೂಚನೆಯ ಮೇರೆಗೆ ತನ್ನ ಮೊಬೈಲ್ ನಲ್ಲಿ ವೀಡಿಯೋ ಮಾಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-115 ಪ್ರಾ.ಸಾ.12 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನಂತರ ತನಿಖಾಧಿಕಾರಿಗಳ ಸೂಚನೆಯ ಮೇರೆಗೆ ಮೇಲೆ ಹೇಳಿದಂತೆ ಅವರ ಮೊಬೈಲ್ ನಲ್ಲಿ ತೆಗೆದಿದ್ದ ನಿಪಿ.3 ರಿಂದ 6, 11 ರಿಂದ 20, 36 ಮತ್ತು ನಿಪಿ.37 ಫೋಟೋಗಳನ್ನು ಮತ್ತು ತನ್ನ ಮೊಬೈಲ್ ನಲ್ಲಿ ಮಾಡಿಕೊಂಡಿದ್ದ ವೀಡಿಯೋವನ್ನು ವೃತ್ತ ಕಛೇರಿಗೆ ಒದಗಿಸಲಾಗಿದ್ದ ಹೆಚ್.ಪಿ ಕಂಪೆನಿಯ ಕಂಪ್ಯೂಟರ್ ಗೆ ಯಥಾಸ್ಥಿತಿಯಲ್ಲಿ ವರ್ಗಾಯಿಸಿ ನಂತರ ನಿಪಿ.46 ಮತ್ತು ನಿಪಿ.47 ಫೋಟೋಗಳನ್ನು ಮತ್ತು ವೀಡಿಯೋವನ್ನು ಎರಡು ಖಾಲಿ ಸಿಡಿಗಳಿಗೆ ಯಥಾಸ್ಥಿತಿಯಲ್ಲಿ ವರ್ಗಾಯಿಸಿ ತನಿಖಾಧಿಕಾರಿಗಳಿಗೆ ನೀಡಿದ್ದಾಗಿ, ನಂತರ ಆ ಬಗ್ಗೆ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65 ಬಿ ರಡಿಯಲ್ಲಿ ತನಿಖಾಧಿಕಾರಿಗಳಿಗೆ ನಿಪಿ.48 ರಂತೆ

ದೃಢೀಕರಣ ಪತ್ರವನ್ನು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-116 ಫ್ರಾ.ಸಾ.13, ಗೋಪಾಲಗೌಡ ಇವರು ತಮ್ಮ ಸಾಕ್ಷ್ಯದಲ್ಲಿ ತನ್ನ ಹೆಸರಿನಲ್ಲಿ ಹೊನ್ನಗುಂಡಿಯಲ್ಲಿ ಒಂದು ಜಾಗ ಮತ್ತು ಮನೆ ಇದ್ದುದ್ದಾಗಿ, ಇಪ್ಪತ್ತೆರಡು ವರ್ಷಗಳ ಹಿಂದೆ ಆರೋಪಿಯಾದ ತಂದೆ ಗುರುವ ಇವರಿಗೆ ಹೊನ್ನಗುಂಡಿಯಲ್ಲಿರುವ ಮನೆಯನ್ನು ಮೂವತ್ತೊಂದು ಸಾವಿರ ರೂಪಾಯಿಗೆ ಮಾರಾಟ ಮಾಡಿದ್ದಾಗಿ, ತಾನು ಸದರಿ ಮನೆಯನ್ನು ಮಾರಾಟ ಮಾಡುವ ಕಾಲಕ್ಕೆ ಆರೋಪಿಯಾದ ನೀನು ಹಾಗೂ ನಿನ್ನ ಕುಟುಂಬದ ಸದಸ್ಯರಾದ ತಂದೆ, ತಾಯಿ ಹಾಗೂ ನಿನ್ನ ತಮ್ಮ ಎಲ್ಲರೂ ವಾಸವಾಗಿದ್ದುದ್ದಾಗಿ, ತಾನು ಆಕಾಲಕ್ಕೆ ಮೇಥಿಖಾನ್ ಎಸ್ಟೇಟಿನಲ್ಲಿ ವಾಸವಾಗಿದ್ದುದ್ದಾಗಿ ಈಗಾಲೂ ಕೂಡ ಅಲ್ಲೇ ವಾಸವಾಗಿದ್ದುದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-117 ಫ್ರಾ.ಸಾ.13 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ತಾನು ಮಾರಾಟ ಮಾಡಿದ ಹೊನ್ನಗುಂಡಿಯಲ್ಲಿವರು ಮನೆಯ ಖಾತಾ ಈಗಲೂ ತನ್ನ ಹೆಸರಿನಲ್ಲಿದ್ದುದ್ದಾಗಿ, ಕಾರಣ ಗುರುವರವರು ಖಾತೆಯನ್ನು ಬದಲಾಯಿಸಲು ಬಂದಿರುವುದಿಲ್ಲ ಎಂದು, ಈಗ ಗುರುವ ಮತ್ತು ಜಾನಕಿ ಜೀವಿತ ಇರುವುದಿಲ್ಲ ಎಂದು, ಹೊನ್ನಗುಂಡಿಯಲ್ಲಿರುವ ಮನೆ ಹೆಂಚಿನ ಮನೆಯಾಗಿದ್ದಾಗಿ, ನಿಪಿ.11 ಮತ್ತು 12 ಭಾವಚಿತ್ರಗಳಲ್ಲಿ 22 ವರ್ಷದ ಹಿಂದೆ ಮಾರಾಟ ಮಾಡಿದ ಮನೆ ಕಂಡು ಬಂದಿದ್ದಾಗಿ, ತಾನು ಹೊನ್ನಗುಂಡಿಯಲ್ಲಿರುವ ಮನೆಗೆ ವಿದ್ಯುತ್ ಸಂಪರ್ಕವನ್ನು ಪಡೆದಿರುವುದಿಲ್ಲ ಎಂದು, ತಾನು ಸದರಿ ಮನೆಯನ್ನು ಮಾರಾಟ ಮಾಡುವ ಕಾಲಕ್ಕೆ ವಿದ್ಯುತ್ ಸಂಪರ್ಕ ಇರಲಿಲ್ಲ ಎಂದು, ಗುರುವ ಮತ್ತು ಜಾನಕಿ ತೀರಿಕೊಂಡ ನಂತರ ಸದರಿ ಮನೆಯಲ್ಲಿ ಆರೋಪಿಯಾದ ನೀನು, ನಿನ್ನ ಹೆಂಡತಿ ಮತ್ತು ನಿನ್ನ ತಮ್ಮ ವಾಸವಾಗಿದ್ದುದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-118 ಪ್ರಾ.ಸಾ.13 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಆರೋಪಿಯಾದ ನಿನ್ನ ಹೆಂಡತಿ ಸತ್ತ 15 ದಿನಗಳ ನಂತರ ತನ್ನನ್ನು ಜಯಪುರ ಪೋಲೀಸರು ವಿಚಾರಣೆಗೆ ಕರೆದಿದ್ದಾಗಿ, ತನ್ನನ್ನು ವಿಚಾರಣೆಗೆ ಒಳಪಡಿಸಿದಾಗ ಈ ಮೇಲಿನ ವಿಷಯವನ್ನು ಪೋಲಿಸರಿಗೆ ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-119 ಈ ಕೇಸಿನಲ್ಲಿ ನೀನು ಹೆಚ್ಚಿಗೆ ಏನಾದರೂ ಹೇಳುವುದು ಇದೆಯೇ?

ಉತ್ತರಃ Yes accused submits his statement which is enclosed.

ಪ್ರಶ್ನೆ-120 ನಿನ್ನ ಪರ ಸಾಕ್ಷಿಗಳ ವಿಚಾರಣೆ ಮಾಡುವಿರಾ?

ಉತ್ತರಃ No

(ಮೇಲಿನ ಪ್ರಶ್ನೆಗಳನ್ನು ಆರೋಪಿತನಿಗೆ ಕೇಳಿ ಆತನು ಕೊಟ್ಟ ಉತ್ತರವನ್ನು ನಾನೇ ಸ್ವತಃ ಕೇಳಿ ಬರೆದುಕೊಂಡಿರುವುದು ನಿಜವಾಗಿದೆ ಎಂದು ದೃಢೀಕರಿಸುತ್ತೇನೆ)

Sd/-
(ಗುರುಪ್ರಸಾದ್ ಕುಲಕರ್ಣಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಚಿಕ್ಕಮಗಳೂರು

ಪೊಲೀಸರಿಗೆ ನಾನು ಯಾವುದೇ ನಿರ್ಬಂಧವಿಲ್ಲದೆ ಸ್ವಇಚ್ಛೆಯಿಂದ
ಹೇಳಿಕೆ ನೀಡುತ್ತಿದ್ದೇನೆಂದರೆ.

ನಾನು ಶಾಲಾ ವಿದ್ಯಾಭ್ಯಾಸ ಮುಗಿದ ನಂತರ
ನಮ್ಮ ಹುಟ್ಟಿದ ಊರಿನ ವಿದ್ಯಾಭ್ಯಾಸ ನನಗೆ ಕೊಡಿಸದೆ
ಹೊರಗೆ ಕಸ್ತೂರಿ ಕೆಲಸವನ್ನು ಬಿಟ್ಟು, ನಾನು
M.S. Estateನಲ್ಲಿ ತೋಟ ಕೆಲಸ ಮಾಡಿಕೊಂಡು
ಬೇರೆ Estateನಲ್ಲಿ ಮಾಡಿಲ್ಲ. ಬೇರೆ ಯಾವುದೇ
ವ್ಯವಹಾರವಿರುವುದು ನನಗೆ ಗೊತ್ತಿರುವುದಿಲ್ಲ, ಹಾಗು
M.S Estateನ ಮಾಲೀಕರು ನಾನು ಕೆಲಸ ಮಾಡುತ್ತಿದ್ದ
ಹೊರಗೆ ನನ್ನನ್ನು ಕರೆದುಕೊಂಡು ಬರುತ್ತಿದ್ದರು, ನಾನು
ಬಂದು ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು, ನಾನು
ಯಾವುದೇ ಕೆಲಸವನ್ನು ಮಾಡಿರುವುದಿಲ್ಲ, ನನಗೂ ಈ ಪ್ರಕರಣಕ್ಕೂ
ಯಾವುದೇ ರೀತಿಯ ಸಂಬಂಧವಿಲ್ಲ. ಸದಾನಂದ

11/6/17